


ಸಂಕಲನ

ಜ.ಹೊ. ನಾರಾಯಣಸ್ವಾಮಿ

ಪ್ರೊ. ಎ.ಎಸ್. ಕಾಳೇಗೌಡ    ಟಿ.ಎಂ. ಶಿವಶಂಕರಪ್ಪ

ಪ್ರಕಟಣೆ
ಜಿಲ್ಲಾದಲಿತ, ಹಾಸನ
ಉಚಿತ ಪ್ರತಿ

# ಪ್ರಾಸ್ತಾವಿಕ ನುಡಿ

ಕುವೆಂಪು ಕನ್ನಡ ನಾಡಿನ ಹೆಮ್ಮೆಯ ಕವಿ, ಮೇಲಾಗಿ "ವಿಶ್ವ ಮಾನವ". ಜಗದ ಕವಿ, ಯುಗದ ಕವಿ. ಮಹಾ ಪುರುಷರು ಯುಗಕ್ಕೊಮ್ಮೆ ಹುಟ್ಟಿ ಬರುತ್ತಾರೆ ಎನ್ನುವ ಮಾತಿಗೆ ರಾಷ್ಟ್ರ ಕವಿ ಕುವೆಂಪು ಸಾಕ್ಷಿ. ಅವರದು ಋಷಿ ಸದೃಶ ಬದುಕು. **"ರಸವಲ್ಲದಿನ್ನಿಲ್ಲ ವಿಶ್ವದಲಿ"** ಎಂಬುದನ್ನು ಸಾಕ್ಷಾತ್ಕರಿಸಿಕೊಂಡ **ಉಪನಿಷತ್ ಕವಿ.** ಅದ್ವಿತೀಯ ಸಾಹಿತ್ಯ ರಚಿಸಿದ ಮೇರು ಸಾಹಿತಿ, ಕನ್ನಡ ಧ್ಯಾನಿ. ತಮ್ಮ ಶ್ರೇಷ್ಠ ಸಾಹಿತ್ಯದಿಂದ ಕನ್ನಡ ಭಾಷೆಗೆ, ಸಾಹಿತ್ಯಕ್ಕೆ, ಸಂಸ್ಕೃತಿಗೆ ಹೊಸ ಚೇಗನ್ನು ತಂದು ಕೊಟ್ಟ ದಿವ್ಯ ಚೇತನ. ಕನ್ನಡ ಸಾಹಿತ್ಯವನ್ನು ಗಗನೋನ್ನತವಾಗಿ ಬೆಳೆಸಿ, ಕನ್ನಡ ನಾಡಿನ ಗೌರವ ದಿಗ್ದಿಗಂತಗಳಲ್ಲಿ ಹರಡಲು ಕಾರಣರಾಗಿ, ವಿಶ್ವ ಸಾಹಿತ್ಯಕ್ಕೆ ಶ್ರೀರಾಮಾಯಣ ದರ್ಶನಂ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಮೊದಲಾದ ಕೃತಿಗಳನ್ನು ಕಾಣಿಕೆ ನೀಡಿದ ಕವಿ ಶ್ರೇಷ್ಠರು ಇವರನ್ನು ಪಡೆದ ಕನ್ನಡ ನಾಡು, ಕನ್ನಡ ಜನ ಧನ್ಯ.

ಜಾತಿ, ಮತ, ಜನಾಂಗೀಯ ದ್ವೇಷಗಳಿಂದ ತಲ್ಲಣಗೊಂಡಿರುವ ವಿಶ್ವಕ್ಕೆ ವಿಶ್ವ ಮಾನವ ಸಂದೇಶ ನೀಡಿದ ಮಾನವೀಯ ಕವಿ. ಅವರ ಸಂದೇಶ ಜೀವ ತುಂಬುವ ಸಂಜೀವಿನಿ. ಅವರ ವಿಚಾರಗಳು ಬುದ್ಧಿಗೆ ಪುಷ್ಟಿಯನ್ನು, ಹೃದಯಕ್ಕೆ ತುಷ್ಟಿಯನ್ನು ನೀಡಿ ಬೆಳಕಿನ ದಾರಿಯಲ್ಲಿ ನಡೆಸುತ್ತವೆ.

ಈ ಮಹಾನ್ ಚೇತನದ ಶತಮಾನೋತ್ಸವವನ್ನು ವಿಶ್ವ ಮಾನವ ವರ್ಷವನ್ನಾಗಿ ಕರ್ನಾಟಕ ಸರ್ಕಾರ ಆಚರಿಸಿ ಗೌರವವನ್ನು ಅರ್ಪಿಸಿದೆ. ಅದರಂತೆ ಜಿಲ್ಲಾಡಳಿತ, ಹಾಸನ ಇಡೀ ವರ್ಷ ಜಿಲ್ಲೆಯಲ್ಲಿ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕವಿ ಚೇತನಕ್ಕೆ ನಮನ ಸಲ್ಲಿಸಿದೆ.

ಈ ಸಂದರ್ಭದಲ್ಲಿ ಕುವೆಂಪು ಅವರ ವಿಚಾರಗಳ ಕಿರು ಹೊತ್ತಿಗೆಯನ್ನು ಪ್ರಕಟಿಸಿ, ಜಿಲ್ಲೆಯ ವಿದ್ಯಾರ್ಥಿವೃಂದಕ್ಕೆ ಹಾಗೂ ಜನತೆಗೆ ನೀಡಬೇಕೆಂಬ ಹಂಬಲದ ಫಲವೇ ಈಗ ನಿಮ್ಮ ಕೈಯಲ್ಲಿರುವ ಈ ಕಿರು ಹೊತ್ತಿಗೆ. ಈ ಕಿರು ಹೊತ್ತಿಗೆಯಲ್ಲಿ ಕುವೆಂಪು ಅವರ ಕೃತಿಗಳಲ್ಲಿನ ಕೆಲವು ಉಧೃತ ಭಾಗಗಳನ್ನು ಮಾತ್ರ ನೀಡಿದ್ದು ಕುವೆಂಪು ಅವರು ರಚಿಸಿದ ಸಾಹಿತ್ಯದ ಬಗ್ಗೆ ಓದುಗರಲ್ಲಿ ಆಸಕ್ತಿ ಅಭಿಮಾನ ಕಿಂಚಿತ್ತಾದರೂ ಮೂಡಿದಲ್ಲಿ ಈ ಕಿರು ಹೊತ್ತಿಗೆ ಪ್ರಕಟಿಸಿದ್ದು ಸಾರ್ಥಕವೆಂದು ಭಾವಿಸಿದ್ದೇನೆ. ಇದನ್ನು ಅತ್ಯಂತ ಶ್ರದ್ಧೆಯಿಂದ ಸಂಕಲಿಸಿದ ಸಂಕಲನಕಾರರಿಗೆ, ಈ ಕೃತಿಗೆ ಪ್ರಾಯೋಜಕರಾದ ಟಾಟಾ ಕಾಫಿ ಲಿಮಿಟೆಡ್, ಪಾಲಿಬೆಟ್ಟ, ಕೊಡಗು, ಕರ್ನಾಟಕ ಅವರಿಗೆ, ಜಿಲ್ಲಾಡಳಿತದೊಂದಿಗೆ ಕುವೆಂಪು ಜನ್ಮ ಶತಮಾನೋತ್ಸವವನ್ನು ಆಚರಿಸಲು ಸಹಕರಿಸಿದ ಎಲ್ಲಾ ಅಧಿಕಾರಿ ವರ್ಗದವರಿಗೆ, ಸಿಬ್ಬಂದಿ ವರ್ಗದವರಿಗೆ, ಜನಪ್ರತಿನಿಧಿಗಳಿಗೆ, ಸಾಹಿತ್ಯ ಪ್ರೇಮಿಗಳಿಗೆ ಸಾರ್ವಜನಿಕರಿಗೆ ಜಿಲ್ಲಾಡಳಿತ ಆಭಾರಿಯಾಗಿದೆ.

**ಕೆ. ಹೆಚ್. ಅಶ್ವತ್ಥನಾರಾಯಣಗೌಡ,** ಭಾ.ಆ.ಸೇ.
ಜಿಲ್ಲಾಧಿಕಾರಿಗಳು, ಹಾಸನ

**'ಯುಗದಕವಿ, ಜಗದಕವಿ'** ಎಂದು ಹಿರಿಯರಾದ ವರಕವಿ ಡಾ॥ದ.ರಾ.ಬೇಂದ್ರೆಯವರೂ; **'ಋಷಿ, ಪರಮಾವಧಿ ಋಷಿ'** ಎಂದು ಮತ್ತೋರ್ವ ಹಿರಿಯರಾದ ಡಾ॥ ಶಿವರಾಮ ಕಾರಂತರೂ ಅಭಿನಂದಿಸುವ ಎತ್ತರಕ್ಕೆ ಏರಿದ ಕುಪ್ಪಳಿ ವೆಂಕಟಪ್ಪಗೌಡ ಪುಟ್ಟಪ್ಪ-ಕುವೆಂಪು- ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯಲ್ಲಿ ೨೯-೧೨-೧೯೦೪ ರಂದು ಜನಿಸಿದರು. ತಾಯಿ-ಸೀತಮ್ಮ, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹಿರಿಕೊಡಿಗೆ. ಸೀತಮ್ಮನವರ ತಂದೆ ತಿಮ್ಮಯ್ಯ ನಾಯಕ, ತಾಯಿ ಶೇಷಮ್ಮ ಹೆಗ್ಗಡಿತಿ.

ವೆಂಕಟಪ್ಪಗೌಡ - ವೆಂಕಟಯ್ಯಗೌಡ ಎಂದೂ ಕರೆಯುತ್ತಿದ್ದರು- ಮತ್ತು ಸೀತಮ್ಮನವರ ಮದುವೆ ಆದದ್ದು ೩೧-೫-೧೯೦೧ ರಂದು. ಇವರಿಗೆ ಒಬ್ಬಗಂಡು ಮಗ, ಇಬ್ಬರು ಹೆಣ್ಣುಮಕ್ಕಳು. ಅವರೆ ಕೆ.ವಿ.ಪುಟ್ಟಪ್ಪ, ದಾನಮ್ಮ ಹಾಗೂ ಪುಟ್ಟಮ್ಮ. ಸೋದರಿಯರಿಬ್ಬರೂ ಅರೆವಯಸ್ಸಿನಲ್ಲಿ ಅಸುನೀಗಿದರು. ೧೯೧೬ ರಲ್ಲಿ ತಂದೆ ತೀರಿಕೊಂಡರೆ, ತಾಯಿ ಸೀತಮ್ಮ ೧೯೨೫ ರಲ್ಲಿ ತೀರಿಕೊಂಡರು.

ಪ್ರಾಥಮಿಕ ಶಿಕ್ಷಣ ಕುಪ್ಪಳಿಯಲ್ಲಿ; ಮಾಧ್ಯಮಿಕ ಶಿಕ್ಷಣ ತೀರ್ಥಹಳ್ಳಿಯಲ್ಲಿ; ಪ್ರೌಢಶಾಲೆ ಶಿಕ್ಷಣ ಮೈಸೂರಿನ ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ; ಬಿ.ಎ, ಹಾಗೂ ಎಂ.ಎ ಪದವಿಗಳು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ. ಅದೇ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ, ಪ್ರಾಂಶುಪಾಲ ಹುದ್ದೆ. ೧೯೫೬ರಲ್ಲಿ ಕುಲಪತಿಯಾಗಿ ೧೯೬೦ ರಲ್ಲಿ ನಿವೃತ್ತಿ.

ದೇವಂಗಿ ರಾಮಣ್ಣಗೌಡರ ಮಗಳು ಹೇಮಾವತಿ ಅವರೊಂದಿಗೆ ೩೦-೪-೧೯೩೭ ರಂದು ಮದುವೆ. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಕೆ.ಪಿ.ಕೋಕಿಲೋದಯ ಚೈತ್ರ, ಕೆ.ಪಿ. ಇಂದುಕಲಾ, ಕೆ.ಪಿ.ತಾರಿಣಿ ನಾಲ್ಕುಜನ ಮಕ್ಕಳು. ಮನೆಯ ಹೆಸರು 'ಉದಯ ರವಿ.' ಮುಂದೆ ಇದೇ ಕುವೆಂಪು ಕೃತಿಗಳ ಪ್ರಕಾಶನದ ಹೆಸರು ಆಯ್ತು.

ಸಹಧರ್ಮಿಣಿ ಹೇಮಾವತಿಯವರು ೧೯೮೧ ರಲ್ಲಿ ನಿಧನರಾದರು. **'ಕಾಡಿನ ಕೊಳಲಿದು, ಕಾಡಕವಿಯು ನಾ, ನಾಡಿನ ಜನರೊಲಿದಾಲಿಪುದು'** ಎಂದು ಜೀವನವಿಡೀ ಹಾಡಿದ ಕುವೆಂಪು ೧೦-೧ ... ತ್ರೆಗೆ ಮಂಗಳ ಹಾಡಿದ ... ರವೇರಿತು.

## ಪ್ರಶಸ್ತಿ, ಗೌರವ,

೧೯೫೫ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.
೧೯೫೬ ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್.
೧೯೫೭ ಅಧ್ಯಕ್ಷತೆ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಧಾರವಾಡ.
೧೯೫೮ ಪದ್ಮಭೂಷಣ ಪ್ರಶಸ್ತಿ.
೧೯೬೪ ರಾಷ್ಟ್ರಕವಿ ಪ್ರಶಸ್ತಿ.
೧೯೬೬ ಕರ್ನಾಟಕ ವಿಶ್ವ ವಿದ್ಯಾಲಯದ ಗೌರವ ಡಾಕ್ಟರೇಟ್.
೧೯೬೮ ಜ್ಞಾನಪೀಠ ಪ್ರಶಸ್ತಿ 'ಶ್ರೀ ರಾಮಾಯಣದರ್ಶನಂ' ಗೆ.
೧೯೬೮ 'ಗಂಗೋತ್ರಿ' ಅಭಿನಂದನಾ ಗ್ರಂಥದ ಅರ್ಪಣೆ.
೧೯೬೯ ಬೆಂಗಳೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್
೧೯೭೯ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ.
೧೯೭೯ ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಷಿಪ್.
೧೯೮೫ ಮೈಸೂರಿನಲ್ಲಿ ವಿಶ್ವಕನ್ನಡ ಸಮ್ಮೇಳನದ ಉದ್ಘಾಟನೆ.
೧೯೮೬ ಕನ್ನಡ ಸಾಹಿತ್ಯ ಪರಿಷತಿನ ಗೌರವ ಸದಸ್ಯತ್ವ.
೧೯೮೮ ಪದ್ಮ ವಿಭೂಷಣ ಪ್ರಶಸ್ತಿ.
೧೯೮೮ ಪಂಪ ಪ್ರಶಸ್ತಿ 'ಶ್ರೀರಾಮಾಯಣದರ್ಶನಂ' ಗೆ
೧೯೯೦ ವಿಶ್ವಮಾನವ ಸಂದೇಶ ಭವನ, ತಾಯಿಊರು ಹಿರಿಕೊಡಿಗೆಯಲ್ಲಿ.
೧೯೯೨ ಕರ್ನಾಟಕ ರತ್ನ ಪ್ರಶಸ್ತಿ ಕರ್ನಾಟಕ ಸರ್ಕಾರದಿಂದ ಕಾನ್ಪುರ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್.
೧೯೯೫ 'ನಾಡೋಜ' ಮರಣೋತ್ತರ ಪ್ರಶಸ್ತಿ.

## ಕುವೆಂಪು ಯುಗ

ರಾಷ್ಟ್ರಕವಿ, ರಸಋಷಿ, ಕವಿಗುರು, ಕವಿಭೂತಿ ಮುಂತಾದ ಬಿರುದಾಂಕಿತರಾದ ಕುವೆಂಪು ಕನ್ನಡಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಹಾಗೂ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಮೊದಲಿಗರು. ಮೊದಲ ಪಂಪ ಪ್ರಶಸ್ತಿಗೆ ಪಾತ್ರರಾದವರು. ಕರ್ನಾಟಕ ರತ್ನ ಪಡೆದ ಮೊದಲ ಕವಿ. ಕಾನೂರು ಹೆಗ್ಗಡಿತಿ ಕನ್ನಡದ ಮೊದಲ

ಬೃಹತ್ ಲೋಕವಾದಿ ಕಾದಂಬರಿ. ಶ್ರೀರಾಮಾಯಣ ದರ್ಶನಂ, ಕನ್ನಡದ ಮೊದಲ ಆಧುನಿಕ ಮಹಾಕಾವ್ಯ: ಸರಳರಗಳೆಯನ್ನು ಕನ್ನಡದಲ್ಲಿ ಮೊಟ್ಟಮೊದಲಿಗೆ ಬಳಸಿದ ಕವಿ; ಮಹಾಛಂದಸ್ಸಿನ ಪಿತಾಮಹ ಕುವೆಂಪು. ಹೀಗೆ ಅನೇಕ ಪ್ರಥಮಗಳಿಂದ ಹಾಗೂ ಪಂಪನ ನಂತರ ಕುವೆಂಪು ಅವರು ಸಾಧಿಸಿದ ಅಪೂರ್ವ ಸಾಧನೆಗಳಿಂದ ಇದು ಕುವೆಂಪು ಯುಗ.

## ಕೃತಿಗಳು.

**ಕಾವ್ಯಗಳು:-** ಕೊಳಲು, ಅಗ್ನಿಹಂಸ, ಅನಿಕೇತನ, ಅನುತ್ತರಾ, ಇಕ್ಷುಗಂಗೋತ್ರಿ, ಕದರಡಕೆ, ಕಥನ ಕವನಗಳು. ಕಲಾಸುಂದರಿ, ಕಿಂಕಿಣಿ, ಕೃತ್ತಿಕೆ, ಚಂದ್ರಮಂಚಕೆ ಬಾ ಚಕೋರಿ, ಜೇನಾಗುವ, ನವಿಲು, ಪಕ್ಷಿಕಾಶಿ, ಪ್ರೇತಕ್ಯೂ, ಪ್ರೇಮಕಾಶ್ಮೀರ, ಮಂತ್ರಾಕ್ಷತೆ, ಷೋಡಶಿ, ಹಾಳೂರು, ಕೋಗಿಲೆ ಮತ್ತು ಸೋವಿಯಟ್ ರಷ್ಯಾ. ಪಾಂಚಜನ್ಯ, ಕುಟೀಚಕ, ಪ್ರಾರ್ಥನಾ ಗೀತಾಂಜಲಿ, ಕಬ್ಬಿಗನ ಕೈಬುಟ್ಟಿ, ಕನ್ನಡ ಡಿಂಡಿಮ, ಚಿತ್ರಾಂಗದಾ, ಶ್ರೀರಾಮಾಯಣ ದರ್ಶನಂ, ಸಮುದ್ರಲಂಘನ, ಮಹಾದರ್ಶನ ಮತ್ತು ಪ್ರಾಯಶ್ಚಿತ್ತ.

**ನಾಟಕಗಳು:-** ರಕ್ತಾಕ್ಷಿ, ಬೆರಳ್-ಗೆ-ಕೊರಳ್, ಬಿರುಗಾಳಿ. ಯಮನ ಸೋಲು, ವಾಲ್ಮೀಕಿಯ ಭಾಗ್ಯ, ಸ್ಮಶಾನ ಕುರುಕ್ಷೇತ್ರ, ಮಹಾರಾತ್ರಿ, ಜಲಗಾರ, ಶೂದ್ರತಪಸ್ವಿ, ಚಂದ್ರಹಾಸ, ಬಲಿದಾನ, ಕಾನೀನ.

**ಮಕ್ಕಳ ನಾಟಕ:-** ಮೋಡಣ್ಣನ ತಮ್ಮ, ನನ್ನ ಗೋಪಾಲ

**ಶಿಶು ಸಾಹಿತ್ಯ:-** ನನ್ನಮನೆ, ಬೊಮ್ಮನಹಳ್ಳಿಯ ಕಿಂದರಜೋಗಿ, ಮರಿ ವಿಜ್ಞಾನಿ, ಮೇಘಪುರ, ಅಮಲನ ಕಥೆ, ನರಿಗಳಿಗೇಕೆ ಕೋಡಿಲ್ಲ.

**ಕಾದಂಬರಿ:-** ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು.

**ಸಣ್ಣ ಕತೆಗಳು:-** ಸನ್ಯಾಸಿ ಮತ್ತು ಇತರ ಕಥೆಗಳು, ನನ್ನ ದೇವರು ಮತ್ತು ಇತರ ಕಥೆಗಳು,ಕಥೆಗಳೊಡನೆ ಆರಂಭದಲ್ಲಿ.

ವಿಚಾರ:- ಆತ್ಮಶ್ರೀಗಾಗಿ ನಿರಂಕುಶ ಮತಿಗಳಾಗಿ
ಷಷ್ಠಿನಮನ, ವಿಚಾರ ಕ್ರಾಂತಿಗೆ ಆಹ್ವಾನ,
ಮನುಜಮತ-ವಿಶ್ವಪಥ.

ಚಿತ್ರ ಪ್ರಬಂಧ:- ಮಲೆನಾಡಿನ ಚಿತ್ರಗಳು.

ವಿಮರ್ಶೆ ಮತ್ತು ಮೀಮಾಂಸೆ :-ವಿಭೂತಿ ಪೂಜೆ, ಕಾವ್ಯವಿಹಾರ,
ಸಾಹಿತ್ಯ ಪ್ರಚಾರ, ತಪೋನಂದನ,
ದ್ರೌಪದಿಯಶ್ರೀಮುಡಿ, ಇತ್ಯಾದಿ, ರಸೋವೈಸಃ.

ಜೀವನ ಚರಿತ್ರೆ:- ಸ್ವಾಮಿವಿವೇಕಾನಂದ, ರಾಮಕೃಷ್ಣಪರಮಹಂಸ

ಅನುವಾದ:- ಗುರುವಿನೊಡನೆ ದೇವರಡಿಗೆ, ವೇದಾಂತ.

ಆತ್ಮ ಚರಿತ್ರೆ:- ನೆನೆಪಿನ ದೋಣಿಯಲ್ಲಿ.

ಇತರೆ:- ಜನಪ್ರಿಯ ವಾಲ್ಮೀಕಿ ರಾಮಾಯಣ, ಪ್ರಸಾರಾಂಗ,
ಕೊನೆಯತೆನೆ ಮತ್ತು ವಿಶ್ವಮಾನವ ಸಂದೇಶ,
ಹೊನ್ನ ಹೊತ್ತಾರೆ.

## ಪಂಚಮಂತ್ರ

ಪ್ರತಿಯೊಂದು ಮಗುವೂ ಹುಟ್ಟುತ್ತಲೆ-ವಿಶ್ವಮಾನವ. ಬೆಳಯುತ್ತಾ ನಾವು ಅದನ್ನು ಅಲ್ಪ ಮಾನವ ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು ವಿಶ್ವಮಾನವನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು.

ಹುಟ್ಟುವಾಗ ವಿಶ್ವಮಾನವನಾಗಿಯೆ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿ ಅವನನ್ನು ಬುದ್ಧನನ್ನಾಗಿ ಪರಿವರ್ತಿಸುವುದೆ ನಮ್ಮ ವಿದ್ಯೆ, ಸಂಸ್ಕೃತಿ, ನಾಗರಿಕತೆ ಎಲ್ಲದರ ಆದ್ಯ ಕರ್ತವ್ಯವಾಗ ಬೇಕು. ಪ್ರಪಂಚದ ಮಕ್ಕಳೆಲ್ಲ ಅನಿಕೇತನರಾಗಬೇಕು, ಲೋಕ ಉಳಿದು ಬಾಳಿ ಬದುಕಬೇಕಾದರೆ !



ಮಾನವನ ವಿಕಾಸದ ಹಾದಿಯಲ್ಲಿ ಆಯಾ ಕಾಲದ ಅಗತ್ಯವನ್ನು ಪೂರೈಸಲು ಮಹಾಪುರುಷರು ಸಂಭವಿಸಿ ಹೋಗಿದ್ದಾರೆ. ಅವರಲ್ಲಿ ಕೆಲವರ ವಾಣಿ ವಿಶಿಷ್ಟ ಧರ್ಮವಾಗಿ ರೂಪುಗೊಂಡು ಕಡೆಗೆ ಮತವಾಗಿ ಪರಿಮಿತವಾಯಿತು. ಮಾನವರನ್ನು ಕೂಡಿಸಿ ಬಾಳಿಸಬೇಕೆಂಬ ಸದುದ್ದೇಶದಿಂದ ಹುಟ್ಟಿಕೊಂಡ ಮಹಾತ್ಮರ ವಾಣಿ ಮತವಾಗಿ ಮಾದಕವಾಯಿತು. ಒಂದು ಯುಗಕ್ಕೆ ಅಗತ್ಯವೆನ್ನಿಸಿದ ಧರ್ಮ ಕಾಲಾನುಕಾಲಕ್ಕೆ ಮತವಾಗಿ ನಿರುಪಯುಕ್ತವೆನಿಸಿ ಮತ್ತೊಂದು ಹೊಸ ಧರ್ಮಕ್ಕೆ ಎಡೆಗೊಟ್ಟುದೂ ಉಂಟು. ಹೀಗಾಗಿ ಅನೇಕ ಧರ್ಮಗಳು ಮತಗಳಾಗಿ ಜನತೆಯನ್ನು ಗುಂಪು ಗುಂಪಾಗಿ ಒಡೆದಿವೆ; ಯುದ್ಧಗಳನ್ನು ಹೊತ್ತಿಸಿವೆ. ಜಗತ್ತಿನ ಕ್ಷೋಭೆಗಳಿಗೆಲ್ಲ ಮೂಲಕಾರಣವೆಂಬಂತೆ ! ವಿಜ್ಞಾನ ಯುಗದ ಪ್ರಾಯೋಗಿಕ ದೃಷ್ಟಿಗೆ ಇನ್ನು ಮೇಲೆ ಮತ ಮೌಢ್ಯದ ಒಪ್ಪಿಗೆಯಾಗದು. ವಿನೋಬಾಭಾವೆಯವರು ಹಿಂದೆ ಹೇಳಿದಂತೆ ಮತ ಮತ್ತು ರಾಜಕೀಯದ ಕಾಲ ಆಗಿ ಹೋಯಿತು. ಇನ್ನೇನಿದ್ದರೂ ಆಧ್ಯಾತ್ಮ ಮತ್ತು ವಿಜ್ಞಾನದ ಕಾಲ ಬರಬೇಕಾಗಿದೆ.

**ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ ಪೂರ್ಣದೃಷ್ಟಿ**- ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ, ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; ಮನುಜಮತ. ಆ ಪಥ ಈ ಪಥ ಅಲ್ಲ; ವಿಶ್ವಪಥ. ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು. ಮಿತಮತದ ಆಂಶಿಕ ದೃಷ್ಟಿಯಲ್ಲ; ಭೌತಿಕ ಪಾರಮಾರ್ಥಿಕ ಎಂಬ ಭಿನ್ನದೃಷ್ಟಿಯಲ್ಲ; ಎಲ್ಲವನ್ನೂ ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ.

ಯಾವ ಭಾವನೆಗಳು ಜಗತ್ತಿನಲ್ಲಿ ಎಲ್ಲ ಮಾನವರಿಗೂ ಅನ್ವಯವಾಗಬಹುದೊ ಅಂತಹ ಭಾವನೆ ಅಂತಹ ದೃಷ್ಟಿ ಬರಿಯ ಯಾವುದೋ ಒಂದು ಜಾತಿಗೆ, ಮತಕ್ಕೆ, ಗುಂಪಿಗೆ, ಒಂದು ದೇಶಕ್ಕೆ ಮಾತ್ರ ಅನ್ವಯವಾಗುವುದಿಲ್ಲ. ಸರ್ವಕಾಲಕ್ಕೂ ಅನ್ವಯವಾಗುವ ಇವು ಮೂಲ ಮೌಲ್ಯಗಳು. ಈ ಮೌಲ್ಯಗಳು ಮಾನವರನ್ನು ಕೂಡಿಸಿ ಬಾಳಿಸುವತ್ತ ನಡೆದಾವು. ಗುಂಪುಗಾರಿಕೆಗೆಂದೂ ಇವು ತೊಡಗುವುದಿಲ್ಲ; ಅದೇನಿದ್ದರೂ ರಾಜಕೀಯದ ಕರ್ಮ. ವ್ಯಕ್ತಿಸ್ವಾತಂತ್ರ್ಯವನ್ನು ನೀಡಿಯೂ ಸಮಷ್ಟಿಯ

ಉದ್ಧಾರದ ದೃಷ್ಟಿ ಇದರದು. ಈ ದೃಷ್ಟಿಗೆ ವ್ಯಕ್ತಿಗಳೆಷ್ಟೋ ಅಷ್ಟೂ ವ್ಯಕ್ತಿಗಳು ಸಮಷ್ಟಿಯ ವಿಕಾಸಕ್ಕೆ ಸಾಧಕವಾಗುವುದೂ ಸಾಧ್ಯ. ಈ 'ದರ್ಶನ'ವನ್ನೆ ವಿಶ್ವಮಾನವಗೀತೆ ಸಾರುತ್ತದೆ.

**ಕುವೆಂಪು**

(ನಿಕೇತನ ಅಂದರೆ ಮನೆ, ಅನಿಕೇತನ ಎಂದರೆ ಮನೆ ಇಲ್ಲದಿರುವುದು ಎನ್ನುವುದು ವಾಚ್ಯಾರ್ಥ. ಅದರ ಸೂಚ್ಯಾರ್ಥ ಯಾವುದೇ ಜಾತಿ, ಮತ, ಕುಲ, ಗೋತ್ರ, ಭಾಷೆ, ದೇಶಗಳಿಗೆ ಅಂಟಿಕೊಳ್ಳದೆ ಹಾಗೂ ಅವುಗಳಿಗೆ ಸೇರಿರುವ ಭ್ರಮೆಗಳನ್ನು ಹೊಂದದೆ ಮಾನಸಿಕ ಗೋಡೆಗಳನ್ನು ಕಟ್ಟಿಕೊಂಡು ಅದರಲ್ಲಿ ಉಳಿಯದೆ, ವಿಶ್ವಮನಸ್ಸನ್ನು ಒಳಗೊಂಡು ಚೈತನ್ಯ ವಿಶ್ವವ್ಯಾಪಕ ವಾಗಬೇಕು ಎಂಬ ಅರ್ಥ. ಮುಂದಿನ ಸಾಲುಗಳು ಈ ಅರ್ಥವನ್ನೆ ಇನ್ನೂ ವಿಸ್ತಾರವಾಗಿ ತಿಳಿಸುತ್ತವೆ. ಮನುಷ್ಯರ ಮನಸ್ಸು ಹೃದಯಗಳು ನಿಂತ ನೀರಾಗದೆ ನಿರಂತರ ಆಗುವಿಕೆಯತ್ತ ಹರಿಯುತ್ತಿರಲಿ ಎಂಬ ಕವಿಯ ಆಶಯವನ್ನ **ಆಗು ಆಗು ಆಗು** ಸಾಲು ಧ್ವನಿಸುತ್ತದೆ.)

## ಸಪ್ತ ಸೂತ್ರ

೧ ಮನುಷ್ಯ ಜಾತಿ ತಾನೊಂದೆ ವಲಂ ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು.

೨ ವರ್ಣಾಶ್ರಮವನ್ನು ತಿದ್ದುವುದಲ್ಲ, ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು. ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ, ಷಿಯಾ, ಸುನ್ನಿ, ಕ್ಯಾಥೋಲಿಕ್, ಪ್ರಾಟೆಸ್ಟಂಟ್, ಸಿಖ್, ನಿರಂಕಾರಿ ಇತ್ಯಾದಿ ಇತ್ಯಾದಿ ವಿಭಜನೆಯನ್ನು ನಿರ್ನಾಮ ಮಾಡಬೇಕು.

೩ ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಮತಗಳಲ್ಲಿರುವ ಜಾತಿಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ ವಿನಾಶಗೊಳಿಸ ಬೇಕು.

೪ ಮತ ತೊಲಗಿ ಆಧ್ಯಾತ್ಮ ಮಾತ್ರ ವೈಜ್ಞಾನಿಕ ತತ್ವವಾಗಿ ಮಾನ್ಯತೆ ಪಡೆಯಬೇಕು.

೫ ಮತ ಮನುಜಮತ ವಾಗಬೇಕು ; ಪಥ ವಿಶ್ವಪಥವಾಗ ಬೇಕು; ಮನುಷ್ಯ ವಿಶ್ವಮಾನವನಾಗಬೇಕು.

೬ ಮತ ಗುಂಪುಕಟ್ಟುವ ವಿಷಯವಾಗಬಾರದು. ಯಾರೂ ಯಾವ ಒಂದು ಮತಕ್ಕೂ ಸೇರದೆ, ಪ್ರತಿಯೊಬ್ಬನೂ ತಾನು ಕಂಡುಕೊಳ್ಳುವ ತನ್ನ ಮತಕ್ಕೆ ಮಾತ್ರ ಸೇರಬೇಕು. ಅಂದರೆ ಜಗತ್ತಿನಲ್ಲಿ ಎಷ್ಟು ವ್ಯಕ್ತಿಗಳಿದ್ದಾರೋ ಅಷ್ಟೇ ಸಂಖ್ಯೆಯ ಮತಗಳಿರುವಂತಾಗುತ್ತದೆ, ಯಾರೊಬ್ಬರೂ ಇನ್ನೊಬ್ಬರ ಮತಕ್ಕೆ ಸೇರಿ ಗುಂಪುಕಟ್ಟಿ ಜಗಳ ಹಚ್ಚುವಂತಾಗಬಾರದು.

೭ ಯಾವ ಒಂದು ಗ್ರಂಥವೂ ಐಕ್ಯೈಕ ಪರಮಪೂಜ್ಯ ಧರ್ಮ ಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ ತಿಳಿದು ತನ್ನ ದರ್ಶನವನ್ನು ತಾನೆ ನಿರ್ಣಯಿಸಿ ಕಟ್ಟಿಕೊಳ್ಳಬೇಕು.

## ಮಂತ್ರ ಮಾಂಗಲ್ಯ

**ಮದುವೆ ಯಾರಿಗೂ ಹೊರೆಯಾಗದಿರಲಿ :-** ಮದುವೆ ಎಂದರೆ ಪರಸ್ಪರ ಒಲಿದ ಅಥವಾ ತಂದೆ ತಾಯಿಗಳೂ, ಪೋಷಕರೂ ನಿರ್ಣಯಿಸಿದ ವಧೂವರರು ಹಿರಿಯರ ಸಮ್ಮುಖದಲ್ಲಿ, ದೈವದ ಸಾನಿಧ್ಯದಲ್ಲಿ ಒಂದಾಗಿ ದಾಂಪತ್ಯದ ವ್ರತವನ್ನು ಸ್ವೀಕರಿಸುವುದು, ಇದು ಗಂಭೀರವಾದ ಮಧುರವಾದ ಮತ್ತು ಆಧ್ಯಾತ್ಮಿಕವಾದ ವಾತಾವರಣದಲ್ಲಿ ನಡೆಯಬೇಕಾದ ವ್ರತ. ಆದರೆ ಈಗ ಆಗುತ್ತಿರುವುದು ಹೇಗೆ ? ತಮ್ಮ ಮತ್ತು ನೆರೆಹೊರೆಯವರ ಮನಶಾಂತಿಯನ್ನು ಕೆಡಿಸುವಂತಹ ವಾದ್ಯಗಳು, ರೆಕಾರ್ಡುಗಳು ಧ್ವನಿವರ್ಧಕಗಳ ಮೂಲಕ ಅರಚುತ್ತಿರುತ್ತವೆ. ಪುರೋಹಿತರು ವಧೂವರರಿಗಾಗಲೀ ಹಿರಿಯರಿಗಾಗಲಿ, ಕೆಲವೊಮ್ಮೆ ತಮಗೂ ತಿಳಿಯದ ಮಂತ್ರಗಳನ್ನು ಗೊಣಗುತ್ತಿರುತ್ತಾರೆ. ಆ ಗದ್ದಲ ದಾಂಧಲೆಗಳಲ್ಲಿ ಅವನ್ನ ಯಾರೂ ಗಮನಿಸಿ ಕೇಳುತ್ತಲೂ ಇರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಅಷ್ಟೇನೂ ಚೈತನ್ಯವಿಲ್ಲದ ಕನ್ಯಾಪಿತೃಗಳನ್ನು ಹಿಂಡಿ ಅವರು ನೂರಾರು ಸಾವಿರಾರು ಜನಕ್ಕೆ ಊಟ ಹಾಕುವಂತೆ ಮಾಡಲಾಗುತ್ತದೆ. ಇನ್ನು ವರದಕ್ಷಿಣೆ, ವರೋಪಚಾರಗಳ ಹಾವಳಿಗಳನ್ನು ಕುರಿತು ಪ್ರಸ್ತಾಪಿಸುವುದೆ ಬೇಡ.



'ಮಂತ್ರ ಮಾಂಗಲ್ಯ' ಎಂಬುದು ಪುಸ್ತಕದ ಮಂತ್ರಗಳ ಸಂಕಲನದ ಹೆಸರು ಮಾತ್ರವಲ್ಲ, ಇದೊಂದು ವಿವಾಹ ವಿಧಾನ. ಜೀವನ ವಿಧಾನವೂ ಆಗಬೇಕೆಂಬುದು ಆಶೆ. ವಧೂವರರು ಮದುವೆಯ ಹೆಸರಿನಲ್ಲಿ ಮದುವೆಯ ಸಂದರ್ಭದಲ್ಲಿ ಪರಸ್ಪರ ಸೂರೆಗೆ ತೊಡಗುವಂತಿಲ್ಲ. ಉಡುಪುಗಳ ಮೆರವಣಿಗೆಯಿಲ್ಲ. ಇತರರ ಕಿವಿಯನ್ನು ಕೊರೆಯುವ ಸಂಗೀತವಿಲ್ಲ, ಚಪ್ಪರ, ಡೇರಾ, ಗುಡಿ ಗುಡಾರಗಳಿಲ್ಲ ; ರಾಹುಕಾಲ, ಗುಳಿಕ ಕಾಲ, ಯಮಗಂಡ ಕಾಲಗಳನ್ನು ಗುಣಿಸುವಂತಿಲ್ಲ ; ನೂರಾರು ಸಾವಿರಾರು ಜನಕ್ಕೆ ಪಂಕ್ತಿ ಪಂಕ್ತಿ ಭೋಜನವೂ ಇಲ್ಲ. ವಧೂವರರು ಅವರ ತಂದೆ ತಾಯಿಗಳೂ ಪರಸ್ಪರ ಒಪ್ಪಿದ ದಿನ ಅನುಕೂಲವಾಗುವ ಸ್ಥಳದಲ್ಲಿ ಅವರಿಗೆಲ್ಲ ಇಷ್ಟವಾದ ದೇವರುಗಳ, ಹಿರಿಯರ ಚಿತ್ರಗಳ ಸಾನಿಧ್ಯದಲ್ಲಿ ಮದುವೆ ನಡೆಯಬಹುದು. ಆದಷ್ಟು ಕಡಿಮೆ ಜನ, ಇಷ್ಟ ಮಿತ್ರರು ಸೇರಿದರೆ ಸಾಕು. ಅಲ್ಲಿ ದೊಂಬಿಯಾಗಬೇಕಾಗಿಲ್ಲ. ಶಾಂತವಾದ ವಾತಾವರಣದಲ್ಲಿ ಮದುವೆ ನಡೆಯಬೇಕು. ಇಲ್ಲಿನ ಮಂತ್ರಗಳನ್ನು ಯಾವ ಪುರೋಹಿತರು ಓದಬೇಕಾಗಿಲ್ಲ. ವಧೂವರರೂ ಇಷ್ಟಮಿತ್ರರೂ ಇವುಗಳನ್ನು ಓದಬಹುದು.

ಪರಸ್ಪರ ಹಾರ ಹಾಕಿಕೊಂಡಮೇಲೆ ವರನು ದಾಂಪತ್ಯದ ಪರಸ್ಪರ ಪ್ರೇಮ ನಿಷ್ಠೆಯ ಸಂಕೇತವಾಗಿ ವಧುವಿಗೆ ಮಾಂಗಲ್ಯವನ್ನು ಕಟ್ಟುತ್ತಾನೆ.

ಹೀಗೆ ಸಹಸ್ರಾರು ವರ್ಷಗಳ ಕಾಲ ಭಾರತವು ಯಾವ ಮೌಲ್ಯಗಳನ್ನು ದೊಡ್ಡದು ಎಂದು ಭಾವಿಸಿ ಆರಾಧಿಸುತ್ತಾ ಬಂದಿದೆಯೋ ಆ ಎಲ್ಲಕ್ಕೂ ಸಂಕೇತಗಳಾಗಿರುವ ಶಕ್ತಿಯನ್ನು ವಧೂವರರು ತಮ್ಮ ಬದುಕಿನ ಈ ಅಮೃತ ಮುಹೂರ್ತದಲ್ಲಿ ಈ ಮಂತ್ರಗಳ ಮೂಲಕ ಆಹ್ವಾನಿಸುತ್ತಾರೆ.

ಮದುವೆ ಹೆಸರಿನಲ್ಲಿ ಆಡಂಬರ, ಅಹಂಕಾರ ಪ್ರದರ್ಶನ ಮತ್ತು ಶೋಷಣೆ ಇವುಗಳ ಕೀಳು ಅಲಂಕಾರಗಳನ್ನು ತೊರೆದ ಶುದ್ಧ ಆರ್ಷೇಯವಾದ ಮದುವೆಯ ವಿಧಾನಕ್ಕೂ ಜೀವನ ವಿಧಾನಕ್ಕೂ ಇಂದು ಸಂಕೇತವಾಗಿ ನಿಂತಿರುವ ಇದು, ಈ ಮಂತ್ರ ಮಾಂಗಲ್ಯ, ಇನ್ನೂ ಸಹಸ್ರಾರು ಮಂದಿಯ ಜೀವನವನ್ನು ಬೆಳಗಲಿ ಎಂದು ಹಾರೈಸುತ್ತೇನೆ.

ಕುವೆಂಪು



## ವಧೂವರರಿಂದ ದಾಂಪತ್ಯ ವ್ರತದ ವಿಧಿ ವಿಧಾನಗಳ ಸ್ವೀಕಾರ

ಇಲ್ಲಿ ಸಮಾವೇಶಗೊಂಡಿರುವ ದೇವಸಮಾನರಾದ ಗುರುಹಿರಿಯರ ಸಾಕ್ಷಿಯಾಗಿ ನಾವಿಂದು ಪತಿ, ಪತ್ನಿಯರಾಗಿ ದಾಂಪತ್ಯ ವ್ರತ ಸ್ವೀಕರಿಸುತ್ತಿದ್ದೇವೆ.

ದಂಪತಿಗಳಾಗುವ ನಾವಿಬ್ಬರು ಮೇಲು ಕೀಳೆನ್ನದೆ ಸರ್ವಸಮಾನದಿಂದ ಬಾಳ್ವೆ ನಡೆಸುತ್ತೇವೆ.

ನಮ್ಮ ವೈವಾಹಿಕ ಜೀವನಯಾತ್ರೆಯಲ್ಲಿ, ಬರಬಹುದಾದ ಸಿಹಿ ಕಹಿಗಳನ್ನು ಸಮಾನವಾಗಿ ಹಂಚಿಕೊಂಡು ಬಾಳುತ್ತೇವೆ.

ಸಮಾಜಕ್ಕಾಗಿ ನಾವು, ನಮಗಾಗಿ ಸಮಾಜ ಎಂಬ ಅರಿವಿನಿಂದ ನಡೆಯುತ್ತೇವೆ.

ಸಮಾಜದಲ್ಲಿ ಬೆಳೆದ ನಾವು, ಸಮಾಜದ ಋಣ ಪರಿಹಾರಕ್ಕೆ ಕೈಲಾದ ಸರ್ವ ನೆರವು ನೀಡುತ್ತೇವೆ.

ಸಂಪ್ರದಾಯಗಳೆಂದು ದೇವರು, ಧರ್ಮ, ಆಧ್ಯಾತ್ಮಗಳ ಹೆಸರಿನಲ್ಲಿ ನಡೆಯುವ ಅವೈಚಾರಿಕ, ಅವೈಜ್ಞಾನಿಕ ಆಚರಣೆಗಳನ್ನು ಬುಡಮೂಲ ತಿರಸ್ಕರಿಸುತ್ತೇವೆ.

ದಿನನಿತ್ಯದ ಪ್ರಾರಂಭವೇ ಶುಭಮುಹೂರ್ತವಾಗಿದ್ದು, ರಾಹುಕಾಲ, ಗುಳಿಕ ಕಾಲ, ಯಮಗಂಡ ಕಾಲಗಳೆಂದು ವಿಂಗಡಿಸುವ ಅಜ್ಞಾನಿಗಳ ನಿಲುವನ್ನು ತಿರಸ್ಕರಿಸುತ್ತೇವೆ.

ವರದಕ್ಷಿಣೆ, ಕನ್ಯಾ ಶುಲ್ಕಗಳಂತಹ ಅನಿಷ್ಟ ವಿಧಾನ ವ್ಯವಹಾರಗಳಿಂದ ಮಾತಾ ಪಿತೃಗಳಿಗೆ, ಮದುವೆಯ ದುಂದುವೆಚ್ಚ ಹೊರೆಯಾಗದಂತೆ ನಮ್ಮ ಪರಿಸರದ ಜನರಿಗೆ ಸರಳ ಮದುವೆ ಆಚರಿಸಲು ಪ್ರೋತ್ಸಾಹಿಸುತ್ತೇವೆ.

ಮದುವೆಯೆಂಬುದು ಪವಿತ್ರತಮ ದೀಕ್ಷೆಯೆಂದು ತಿಳಿದು ವೈವಾಹಿಕ ಜೀವನದಲ್ಲಿ, ಆತ್ಮಸಂಯಮದಿಂದ ಬಾಳುವುದೇ ದಿವ್ಯದರ್ಶನ. ಆತ್ಮ ಸಾಕ್ಷಾತ್ಕಾರ, ಸಮಾಜ ಮತ್ತು ದೇಶಸೇವೆಯೆ ಮದುವೆಯ ಗುರಿಯೆಂದು ತಿಳಿದು ಬಾಳುತ್ತೇವೆ.

ದಂಪತಿಗಳಾಗಿರುವ ನಾವಿಬ್ಬರು ಇಂದಿನಿಂದ ನಿರ್ಮಲ ಪ್ರೇಮದಿಂದ ಸತ್ಯನಿಷ್ಠರಾಗಿ ಸ್ವತಂತ್ರರಾಗಿ ಜಾತಿಮತಗಳ ಭೇದ ಮಾಡದೆ, ಸಮಾಜದಲ್ಲಿ ಬಾಳುತ್ತೇವೆ.

ರಾಷ್ಟ್ರದ ನಿಯಮದಂತೆ ದಂಪತಿಗಳಿಗೆ ಎರಡೇ ಮಕ್ಕಳಿರಲಿ ಎಂಬ ನಿಯಮಕ್ಕೆ ಬದ್ಧರಾಗಿರುತ್ತೇವೆ.



ಏನೇ ಎಡರು ತೊಡರುಗಳು ಬಂದರೂ ಹಿಂದಾಗದೆ ನಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುತ್ತೇವೆ.

## ಮದುವೆ ಮಾಡುವ ವಿಧಾನ

ಕಳಸ, ಮಾಂಗಲ್ಯ, ಎರಡು ಪುಷ್ಪಹಾರಗಳು ತಟ್ಟೆಯಲ್ಲಿ ಮಂತ್ರಾಕ್ಷತೆ ಮುಖ್ಯವಾಗಿರಬೇಕು.

-ಮದುಮಕ್ಕಳಿಗೆ ವಿವಾಹ ಸಂಹಿತೆ ಬೋಧನೆ.

-ಮಾಂಗಲ್ಯಕ್ಕೆ ಮದುಮಕ್ಕಳು ಪೂಜೆ ಸಲ್ಲಿಸಬಹುದು.

-ಈ ಕಾರ್ಯಕ್ರಮದಲ್ಲಿ ಮಾತಾಪಿತೃಗಳು ವೇದಿಕೆಯಲ್ಲಿರ ತಕ್ಕದ್ದು.

-ವಧುವಿಗೆ ವರನು, ವರನಿಗೆ ವಧುವು ಪುಷ್ಪಹಾರ ಹಾಕಬೇಕು.

-ವರನು ವಧುವಿನ ಕೊರಳಿಗೆ ಮಾಂಗಲ್ಯ ಧಾರಣೆ ಮಾಡುವುದು.

-ಮಾತಾಪಿತೃಗಳು ಮಂತ್ರಾಕ್ಷತೆಯನ್ನು ಮದುಮಕ್ಕಳಿಗೆ ಅರ್ಪಿಸಿ ಆಶೀರ್ವದಿಸಿದ ನಂತರ, ತಂದೆ ತಾಯಿಗಳಿಗೆ ವಧೂವರರು ನಮಸ್ಕರಿಸಬೇಕು.

-ಸಭಿಕರು ಸಾಲಾಗಿ ಬಂದು ಮದುಮಕ್ಕಳಿಗೆ ಮಂತ್ರಾಕ್ಷತೆಯಿಂದ ಆಶೀರ್ವದಿಸಬಹುದು.

**ಬಾಲ್ಯವಿವಾಹ** :-ಇದರ ವಿಚಾರವಾಗಿ ಎಷ್ಟು ಹೇಳಿದರೂ ಸ್ವಲ್ಪವೇಸರಿ. ಇದರಿಂದ ನಮ್ಮ ಭರತ ವರ್ಷವೇ ದುರ್ಬಲವಾಗಿದೆ; ಆಗುತ್ತಿದೆ. ಜೀವನ ಪ್ರಾರಂಭದಲ್ಲಿಯೇ ಬಾಲ್ಯವಿವಾಹ ಎಂಬ ವಿಷಕೀಟ ಗ್ರಸ್ತರಾಗಿ ಬಾಡಿ ಬಿದ್ದು ಹೋಗುವುದನ್ನು ಕಂಡರೆ ಯಾವನು ತಾನೆ ಮರುಗುವುದಿಲ್ಲ ? ಕಣ್ಣಿನ ಕಾಂತಿ, ಮನಸ್ಸಿನ ಶಾಂತಿ, ಮುಖದ ತೇಜಸ್ಸು, ಆತ್ಮದ ಓಜಸ್ಸು, ದೇಹದ ಉಲ್ಲಾಸ, ಹೃದಯದ ಉತ್ಸಾಹ ಎಲ್ಲವನ್ನೂ ಕಳೆದುಕೊಂಡು ಜೀವಶವಗಳಂತೆ ಇರುವವರಿಂದ ನಾಡಿಗಾದರೂ ಜನರಿಗಾದರೂ ಏನು ಉಪಯೋಗವಾದೀತು ?



# ಬಿಡುಗಡೆಯ ಬೆಳಕು

ವಿಜ್ಞಾನ ಸಂಪನ್ನವಾದ ಪಾಶ್ಚಾತ್ಯ ನಾಗರಿಕತೆ ನಮ್ಮನ್ನು ಇನ್ನೂರು ವರ್ಷ ಆಳಿದರೂ ಅದರ ವಿಜ್ಞಾನ ಸೃಷ್ಟಿಸಿದ ಯಂತ್ರನಾಗರಿಕತೆಯನ್ನು ಅನುಸರಿಸಿದೆವೇ ಹೊರತು ಅದರ ವೈಜ್ಞಾನಿಕ ದೃಷ್ಟಿ ನಮ್ಮದಾಗಲಿಲ್ಲ; ಮತ್ತು ಆ ವೈಜ್ಞಾನಿಕ ದೃಷ್ಟಿಗೂ ತಾಯಿ ಬೇರಾದ ವೈಚಾರಿಕತೆಯನ್ನು ಮೈಗೂಡಿಸಿಕೊಳ್ಳಲಿಲ್ಲ. ಇನ್ನು ಮುಂದಾದರೂ ನಾವು ವೈಜ್ಞಾನಿಕ ದೃಷ್ಟಿಯ ಮತ್ತು ವೈಚಾರಿಕ ಬುದ್ಧಿಯ ನೆರಳಿನಿಂದ ನಮ್ಮ ನಾಡಿನ ರಾಜಕೀಯ, ಸಾಮಾಜಿಕ ಮತ್ತು ಮತಧಾರ್ಮಿಕ ರಂಗಗಳನ್ನು ಪರಿಶೋಧಿಸದಿದ್ದರೆ ನಮಗೆ ಕೇಡು ತಪ್ಪದು.

ಹಿಂದೂಮತದಲ್ಲಿ ಬೆಳಕು ಎಷ್ಟಿದೆಯೋ ಅದಕ್ಕೆ ಇಮ್ಮಡಿಯಾಗಿ ಆಚಾರದಲ್ಲಿ ಕೊಳಕು ಇದೆ. ಅಯ್ಯೋ, ನಾವೆಲ್ಲರು ಹೇಗೆ ಪದ್ಧತಿಗೆ ಗುಲಾಮರಾಗಿ ಬಿಟ್ಟಿದ್ದೇವೆ !

ಪವಾಡಗಳೆಂದರೆ ಹೊಟ್ಟೆಯ ಪಾಡಿಗಾಗಿ ಮೋಸಗಾರರು ಹೂಡುವ ಕುತಂತ್ರ. ಅಂತಹವರಿಂದಲೇ ಧರ್ಮಜೀವನಕ್ಕೆ ಕಳಂಕವೂ, ಅಪವಾದವೂ ಬಂದೊದಗುತ್ತವೆ.

ಈಗ ನಾವು ಮತ ಎಂದು ಕರೆದುಕೊಳ್ಳುವ ಆಚಾರ ಸಮೂಹ ಬರಿಯ ಸಾಮಾಜಿಕವಾದ ಕಟ್ಟಳೆಗಳ ಕಾಟವಾಗಿದೆ. ಒಬ್ಬರನ್ನೊಬ್ಬರು ಮುಟ್ಟದಿರುವುದು, ನೋಡದಿರುವುದು, ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು; ನಾಮ ಹಾಕಿಕೊಳ್ಳುವುದು, ವಿಭೂತಿ ಹಚ್ಚಿಕೊಳ್ಳುವುದು, ಮುದ್ರೆ ಹೊಡೆದುಕೊಳ್ಳುವುದು, ಶಿಲುಬೆ ಧರಿಸಿಕೊಳ್ಳುವುದು, ಕೆಲವರನ್ನು ಸಾರ್ವಜನಿಕವಾದ ಬಾವಿ ಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು ಇತ್ಯಾದಿ ಕೆಲಸಕ್ಕೂ ಬಾರದ, ಶ್ರೇಯಸ್ಕರವೂ ಅಲ್ಲದ ನೂರಾರು ಆಚಾರ ವ್ಯವಹಾರಗಳ ಸಮಷ್ಟಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ.... ಮಹಾವಿಭೂತಿಗಳು ಸಾರಿದ ಮತ್ತು ಸಾರುತ್ತಿರುವ ಅಮೃತ ಸಂದೇಶ ಅರಣ್ಯ ರೋದನವಾಗಿದೆ.

ವೈಜ್ಞಾನಿಕ ದೃಷ್ಟಿ ಮತ್ತು ವೈಚಾರಿಕ ಬುದ್ಧಿ ಇವನ್ನಾಶ್ರಯಿಸಿ, ವರ್ಣಾಶ್ರಮ ಧರ್ಮ ಮತ್ತು ಜಾತಿ ಪದ್ಧತಿಯಂತಹ ಸಮಾಜ ವಿಚ್ಛಿದ್ರಕಾರಕವಾದ ನೀಚ ಭಾವನೆಗಳನ್ನು ತಿರಸ್ಕರಿಸಿ ವೇದಾಂತ ದರ್ಶನದ ವಿಶಾಲತತ್ವಗಳ ತಳಹದಿಯಮೇಲೆ ನಿಲ್ಲದಿದ್ದರೆ ಹಿಂದೂ ಧರ್ಮವು ಕ್ರಮೇಣವಾಗಿಯಾದರೂ ಸಂಪೂರ್ಣವಾಗಿ ವಿನಾಶ ಹೊಂದುತ್ತದೆ.

ವೇದ ಪೂರೈಸಿದ ಗ್ರಂಥವಲ್ಲ; ವೇದದ ಕಟ್ಟಕಡೆಯ ಅಧ್ಯಾಯ ಅಂದಿಗೆ ಮುಗಿದಿಲ್ಲ. ಅದು ಇಂದಿಗೂ ನಾಳೆಗೂ ಮುಂದುವರಿಯುತ್ತದೆ. ಹಾಗೆಯೇ ಋಷಿಗಳು, ಆಚಾರ್ಯರು ಅಂದಿಗೆ ಪೂರೈಸಿಲ್ಲ, ಕೊನೆಗಂಡಿಲ್ಲ; ಇಂದಿಗೂ ನಾಳೆಗೂ ಬರುತ್ತಾರೆ. ಆದ್ದರಿಂದ ಹೊಸ ಋಷಿಗಳ ಹೊಸ ವೇದವಾಕ್ಯಗಳನ್ನು ಕಿವಿಗೊಟ್ಟು ಕೇಳಿ. ಸಂಕುಚಿತ ಬುದ್ಧಿಯನ್ನು ದೂರಮಾಡಿ. ಹೃದಯಜೀವನ ಹಳೆಯ ನೀರಿನ ಕೊಳಕು ಕೊಳವಾಗದಿರಲಿ. ಯಾವಾಗಲೂ ಹೊಸ ನೀರು ಬಂದು ಹರಿಯುತ್ತಿರುವ ಸ್ವಚ್ಛಸಲಿಲ ಸ್ರೋತವಾಗಲಿ.

ನನ್ನ ಎದೆಯಲ್ಲಿ ಖಾಂಡವವನ ದಹನವಾಗುತ್ತದೆ. ತ್ಯಾಗ ಭೋಗಗಳ ಹಣಾಹಣಿಯಾಗುತ್ತದೆ; ವೈರಾಗ್ಯ ವ್ಯಾಮೋಹಗಳ ಖಡ್ಗ ಖಡ್ಗಿಯಾಗುತ್ತದೆ. ನನ್ನ ಗೆಳೆಯರಿಗೆ ನಾನು ಶಾಂತಿಯ ಮೂರ್ತಿಯಂತೆ ಕಾಣುತ್ತೇನೆ. ಆದರೆ ಅವರರಿಯರು ಎಂತಹ ಭಯಂಕರ ಸಂಗ್ರಾಮ ಭೂಮಿ ನಾನೆಂದು. ಮೇಲೆ ಶಾಂತಿ, ಒಳಗೆ ಕ್ರಾಂತಿ!... ಎದ್ದು ನಿಂತೆನೆಂದರೆ ನನ್ನ ಶಿರ ನಕ್ಷತ್ರಗಳಿಗೆ ತಗುಲಿದಂತಾಗುತ್ತದೆ.

ಸತ್ತ ಕಲ್ಗಳಮುಂದೆ ಅತ್ತು ಕರೆದುದು ಸಾಕು
ಜೀವದಾತೆಯನಿಂದು ಕೂಗಬೇಕು.

ಸರ್ವಮತಗಳಿಗಿಂತಲೂ ಶುದ್ಧ ಹೃದಯದ ಮತ್ತು ಸನ್ಮತಿಯ ಮತವೇ ಮಹೋನ್ನತವಾದುದು.

ಹಳೆಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ.
ಕೊಚ್ಚಿ ಹೋಗಲಿ; ಬರಲಿ ವಿಜ್ಞಾನ ಬುದ್ಧಿ.

ಹಿಂದೂ ಧರ್ಮ ವಿಶ್ವಧರ್ಮ ಆಗಬೇಕಾಗಿದ್ದರೆ ವರ್ಣವ್ಯವಸ್ಥೆ, ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಗಳನ್ನು ಹಿಂದೂ ಧರ್ಮ ಸಂಪೂರ್ಣವಾಗಿ ವಿಸರ್ಜಿಸಿದೆ ಎಂದು ಘೋಷಿಸಬೇಕು. ವೇದಾಂತದರ್ಶನ ಮಾತ್ರ ಹಿಂದೂಧರ್ಮದ ತಾತ್ವಿಕ ಭಿತ್ತಿಯಾಗಬೇಕು: ಯಾವ ಹಿಂದುವಾದರೂ ಯಾವ ಮಠಕ್ಕಾಗಲೀ ಧಾರ್ಮಿಕ ಸಂಸ್ಥೆಗಳಿಗಾಗಲೀ ಅಧಿಪತಿಯಾಗುವ ಅವಕಾಶವಿರತಕ್ಕದ್ದು. ಈಗಿರುವಂತೆ ಜಾತಿ-ಮತ ವರ್ಣಗಳಿಂದ ಕಲುಶಿತವಾಗಿರುವ ಹಿಂದೂಧರ್ಮ ವಿಶ್ವಧರ್ಮವೆನಿಸಿಕೊಳ್ಳಲಾರದು ಮಾತ್ರವಲ್ಲ, ಪ್ರಪಂಚದ ಇತರ ಮತಗಳಿಗಿಂತ ನಿಕೃಷ್ಟವಾದದ್ದೆಂದೇ ಹೇಳಬೇಕು.

ಕೀರ್ತಿ ಕಲುಶಿತವಾಗುವುದಿರಲಿ, ಅಪಕೀರ್ತಿಯೇ ಬಂದರೂ ಸತ್ಯಹೇಳುವುದನ್ನು ನಿಲ್ಲಿಸುವುದಿಲ್ಲ.

ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ಭಕ್ತಿಯ ಪೂಜೆಯ ಹೆಸರಿನಲ್ಲಿ, ತಿರುಪತಿಯ ಹೆಸರಿನಲ್ಲಿ, ಉಡುಪಿಯ ಹೆಸರಿನಲ್ಲಿ, ಧರ್ಮಸ್ಥಳದ ಹೆಸರಿನಲ್ಲಿ ಜನರನ್ನು ಹೆದರಿಸಿ ಯಾವ ರೀತಿ ಸುಲಿಗೆ ಮಾಡುತ್ತಿದ್ದಾರೆ, ಮೋಸಮಾಡುತ್ತಿದ್ದಾರೆ! ಅದನ್ನೆಲ್ಲ ವಿವರಿಸಿ ಹೇಳಬೇಕು. ನೋಡಿ ಹಳೆ ದೇವಸ್ಥಾನಗಳು, ಹಳೆ ದೇವರುಗಳು ಸಾಲದು ಅಂತ ಅವಿವೇಕಿಗಳು ಆ ಸಂಘ ಈ ಪರಿಷತ್ತಿನವರು ಪ್ರತಿವರ್ಷ ನೂರಾರು ದೇವಸ್ಥಾನಗಳನ್ನು ಕಟ್ಟಿಸಿ ಪ್ರತಿಗಾಮಿ ಕುತ್ಸಿತ ಸಂಸ್ಕೃತಿಯನ್ನು ಬೆಳೆಸುತ್ತಿದ್ದಾರೆ. ಜೊತೆಗೆ ಹೊಸ ಹೊಸ ದೇವರುಗಳು! ಹೊಸ ದೇವರುಗಳು ಹೆಚ್ಚಿದಷ್ಟೂ ಅನೈಕ್ಯಕ್ಕೆ ದಾರಿ ಸವೆಸಿದಂತಾಗುತ್ತದೆ; ಪ್ರತ್ಯೇಕತಾ ಮನೋಭಾವನೆಯ ಕಂದಕವನ್ನು ಅಗಲವಾಗಿ ತೋಡಿದಂತಾಗುತ್ತದೆ. ಅಯ್ಯಪ್ಪನ ಉದಯದ ಕಥೆಯಂತು ಹಾಸ್ಯಾಸ್ಪದವಾಗಿದೆ.

ಕಾಯುವುದು ಕಾರ್ಯಸಾಧನೆಗಿಂತ ಕಷ್ಟಕರ.

ಕೈಯಲ್ಲಿ ಶರಣಾರ್ಥಿ, ಬಗಲಲ್ಲಿ ದೊಣ್ಣೆ,
ವಿಷಘೋರವೆದೆಯಲ್ಲಿ, ಬಾಯಲ್ಲಿ ಬೆಣ್ಣೆ

ಒಂದು ದಿನ ಜಾತ್ರೆ; ಅದಕಾಗಿ ಯುಗ ಯುಗದ ಯಾತ್ರೆ

೧೪

## ದರ್ಶನ ದೀಪ್ತಿ

ನೈಯ್ದಾಳುತಿದೆ ಜಗವನೊಂದತಿವಿರಾಣ್ ಮನಂ,
ಸೂಕ್ಷ್ಮಾತಿಸೂಕ್ಷ್ಮ ತಂತ್ರದಿ ಬಿಗಿದು ಕಟ್ಟಿಯುಂ
ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯ ಭಾವಮಂ ನೀಡಿ.

ನೆಲದಲ್ಲಿ ಬಾನಲ್ಲಿ
ಕಡಲು ಕಾಡುಗಳಲ್ಲಿ, ಪಕ್ಕಿ ಮಿಗ ಪುಲ್‌ಗಳಲಿ
ಆರ್ಯರಲಿ ಮೇಣ್ ಅನಾರ್ಯರಲಿ, ಕೇಳ್, ವಿಶ್ವಮಂ
ಸರ್ವತ್ರ ತುಂಬಿದಂತರ್ಯಾಮಿ ಚೇತನಂ ತಾಂ
ಪ್ರೇಮಾತ್ಮವಾಗಿರ್ಪುದು.

ಪಾಪಿಗುದ್ಧಾರಮಿಹುದೌ
ಸೃಷ್ಟಿಯ ಮಹದ್‌ವ್ಯೂಹ ರಚನೆಯೊಳ್

ತನಗೆ ತಾಂ
ನಿಂದೆಯಪ್ಪುದೆ ಕೊಂದುಕೊಂಡಂತೆ.

ಅಪ್ರಕಟಮಾದೊಡೇಂ ?
ಅಪುಣ್ಯರೂಪದಿ ತೋರ್ದೊಡೇಂ ? ತಪಂ ತಪಮಲ್ತೆ!

ಭಗವದಾಗಮನಮೇಂ
ಭಕ್ತನ ನಿರೀಕ್ಷಿಸಿದ ರೂಪದಿಂ ಬಂದಪುದೆ?
ಸುಖದವೋಲಾಶಿಸಲ್ ದುಃಖದೊಲ್ ಮೈದೋರಿ .
ಭಕ್ತನನಿತಂ ಸುಲಿದು ನೈವೇದ್ಯಮಂ ಕೊಳದೆ
ಪೇಳ್ ಆಹಂಕಾರಮಂ ದಿವ್ಯಶೂನ್ಯತೆಗದ್ದುವೊರ್
ಸಂಪೂರ್ಣತಾ ಸಿದ್ಧಿಯೊೀಲ್ !

ತಿಳಿಯದಿರಲೇನ್‌ತಿರೆಗೆ, ಬಾನರಿಯದೇನ್
ಎದೆಯ ಪರಿವರ್ತನೆಯ ಪುಣ್ಯ ಸಂಕ್ರಾಂತಿಯಂ ?

ಕಲ್ಲಾದರೇನ್ ?

ತೀವ್ರತಪದಿಂದೆ ಚೇತನಸಿದ್ಧಿಯಾಗದೇಂ ಜಡಕೆ ?

ತನ್ನವರ್ ಗೆಲ್ಲುವೊಡೆ ತನಗೆ ಸೋಲುವುದೆ ಜಯಂ ?

ಕಣ್ಣಂತೆ ಕಾಣ್ಕೆಯಯ್

ಆಲಸ್ಯದಿಂದಮೃತಮಕ್ಕುಂ ವಿಷಂ

ತನ್ನ ತಾನ್

ಇಲ್ಲಗೈವುದೆ ಎಲ್ಲ ಸಾಧನೆಗೆ ಕೊನೆಯ ಗುರಿ ;
ಮೇಣ್ ತಪಕೆ ಕೇಳ್, ತಂಗೆ, ಪರಮ ಪ್ರಯೋಜನಂ !

ಕಲೆಯನಲ್ಲದೆ ಶಿಲ್ಪಿ ಶಿಲೆಯನೇನ್ ಸೃಷ್ಟಿಪನೆ !

ಜನಮನಮೆ ಯುಗಶಕ್ತಿಯಲ್ತೆ ?

ದುಕ್ಕಿಗೆ ನೆರಂ ದುಕ್ಕಿ

ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ ?

ಶುದ್ಧಿ ಮೇಣ್ ಶ್ರದ್ಧೆಯಿರೆ
ತುದಿಗೆ ತಪ್ಪದು ಸಿದ್ಧಿಸಾಧನೆಗೆ

ಆವುದಾಗಲಿ ನೆಪಂ ಫಲಾದಯಕಂ ತಪಂ

ಚೋರರು ಹೃದಯದೊಳಡಗಿಹರು
ಮನವೆ ಬಲುಜೋಕೆ

ಬೆಳಕು ನೀಡುವ ಮುನ್ನ; ಬೆಳಕು ಪಡೆಯಬೇಕು

ಎಲ್ಲವರ ಸುಖಕ್ಕಾಗಿ ಗೆಯ್ಯಬೇಕೆಲ್ಲ;
ಆದರೂ ಸುಖಿಗಳೊಬ್ಬರು ಕಾಣಲಿಲ್ಲ;

ಅಂತತಮ ನೀ ಗುರು
ಹೇ ಆತ್ಮ ತಮೋಹಾರಿ !

ಈ ಭೂಮಿ ನಮ್ಮ ಆತ್ಮದ ಸಾಧನರಂಗ,
ಇಲ್ಲಿ ವಿದ್ಯೆ ಅವಿದ್ಯೆಗಳೆರಡನ್ನೂ ಅಭ್ಯಸಿಸಬೇಕು
ಪರಸ್ಪರ ವಿರುದ್ಧವಾಗದಂತೆ ಅವೆರಡನ್ನು
ಸಮನ್ವಯಗೊಳಿಸಿಕೊಂಡವರು ಸುಖಿಯಾಗುತ್ತಾರೆ.

ಶೂದ್ರ, ನಪೊಡಂ ತಪಂ ಶಕ್ತಿದಾಯಕಂ
ಆರಾದರೇನ್ ? ಆರಾಧ್ಯರ್ ತಪೋಧನರ್ !
ನಮಸ್ಕಾರಮೆ ಪುಣ್ಯಂ; ತಿರಸ್ಕಾರಮೆ ಪಾಪಂ !

ಸನ್ಮತಿಯ ಸತ್ಕೃತಿಗೆ ಶಾಸ್ತ್ರದ ನೆರಂ ಬೇಕೆ ?

ತಪೋಮಹಿಮೆಗೆಣೆಯುಂಟೆ ?

ಅವಿವೇಕ ತೀವ್ರವಾದ ಶ್ರದ್ಧೆಯಾದರೂ
ಅವಿವೇಕವಾಗಿಯೇ ನಿಲ್ಲತ್ತದೆ ;

ಯಾವ ಕಾರಣದಿಂದಾಗಲಿ, ಯಾವ ದುರಾಗ್ರಹದಿಂದಾಗಲಿ
ಹೃದಯ ಪ್ರವೇಶ ಮಾಡುವ ದಾರಿದ್ರ್ಯವನ್ನು ದೂರೀಕರಿಸಿ;

ವಿದ್ಯಾದಾನದಿಂದ ಮನುಷ್ಯಚೇತನಕ್ಕೆ ಒಂದು ಹೊಸ ನಾಲಿಗೆ
ಸೃಷ್ಟಿಯಾಗುತ್ತದೆ, ಅವನ ಬಾಳಿಗೊಂದು ಹೊಸ ಹಸಿವೆ
ಹುಟ್ಟುತ್ತದೆ.

ಅತ್ಯಂತ ಹೀನ ಮನುಷ್ಯನಿಗೂ ಬುದ್ಧನಾಗಲು ಅವಕಾಶವಿದೆ
ಇದೇ ಆತ್ಮದ ಸಿದ್ಧಾಂತ.



ತಂದೆಯೊಡನೆ ಬಾಲಕ ಕುವೆಂಪು

ತಾಯಿ ಹಸುಳೆಯನೆರ್ದೆಗೆ
ಒತ್ತಿಕೊಳ್ವಂದದಿಂದಾತು ಕೈರೆಯಯ್, ಗುರುವೆ,
ಮಂತ್ರದೀಕ್ಷೆಯ, ನಿಮ್ಮಡಿಯ ಶಿಷ್ಯಸಾಮಾನ್ಯನಂ,
ಮಾನ್ಯನಾ ಕುಪ್ಪಳಿ ವೆಂಕಟಾರ್ಯಂಗೆ ಮೇಣ್ ಪೂಜ್ಯೆ
ಸೀತಮ್ಮನೆಂಬಭಿಧಾನದಾ ಮಾತೃದೇವತೆಗೆ
ಸಂಭವಿಸಿದೀ ಪುಣ್ಯನಂ, ಧನ್ಯನಂ, ದೀನನಂ:
ಕೈವಲ್ಯ ನರನಂ ದೇವಕೀನಂದನುಂ
ತಾವೊಂದೆ ಮೆಯ್ಸುಳ್ಪಿಂದವತಾರಮೆತ್ತಿದಾ
ಶ್ರೀರಾಮಕೃಷ್ಣಭಗವದ್ ಗೋತ್ರ ಸಂಜಾತನಂ,
ಹೇಮಾ ಚಕೋರ ಚಂಚು ಪ್ರೇಮ ಸಂಸ್ತೋತನಂ

ಕುವೆಂಪು ಹಸ್ತಾಕ್ಷರ, ಶ್ರೀರಾಮಾಯಣ ದರ್ಶನಂ





ಮಲೆಯ ನಾಡೆನಗೆ
ತಾಯುಮನೆ. ಕಾಡು ದೇವರ ಬೀಡು. ಗಿರಿಯ ಮುಡಿ
ಶಿವನ ಗುಡಿ. ಬನವಕ್ಕಿ ಮೊದಲಿನಾ ಮನದನ್ನೆ.
ಕವಿಗಾಮಚಂದ್ರನೀ ಸೀತಾ ಕಲಾ ಕಾಂತೆ
ನಿತ್ಯ ವನವಾಸಿಯದರಿಂದಮಾ ಕಬ್ಬಿಗಂ
ಗಿರಿವನಪ್ರೇಮ ಸಾದೃಶ್ಯದಿಂ ಸಮರಸಂ
ಸಮಹೃದಯ ರಾಮ ಕಥಾಋಷಿಗೆ

ಕುವೆಂಪು ಹಸ್ತಾಕ್ಷರ, ಶ್ರೀರಾಮಾಯಣ ದರ್ಶನಂ






ಮಹಾನ್ ಸಾಹಿತಿಯ ಮಗ
ತಂದೆಯಂತೆ ಶ್ರೇಷ್ಠ
ಸಾಹಿತಿಯಾಗಿರುವುದು ಜಗತ್ತಿನಲ್ಲಿ
ಎಲ್ಲೂ ಕಂಡುಬರುವುದಿಲ್ಲ.
ಕುವೆಂಪು ಹಾಗೂ ಅವರ ಮಗ
ಕೆ. ಪಿ. ಪೂರ್ಣಚಂದ್ರತೇಜಸ್ವಿ
ಇದಕ್ಕೆ ಅಪವಾದ. ಕುವೆಂಪು
ಮಲೆನಾಡಿನ ಮಡಿಲಲ್ಲಿ ಹುಟ್ಟಿ
ಮೈಸೂರಿನಲ್ಲಿ ಗರಿಗೆದರಿದರೆ
ತೇಜಸ್ವಿ ಮೈಸೂರಿನಲ್ಲಿ ಬೆಳೆದು
ಮಲೆನಾಡಿನ ಮಡಿಲಲ್ಲಿ
ಗರಿಗೆದರುತ್ತಿರುವುದು ನಿಗೂಢ
ಸೃಷ್ಟಿಯ ವೈಶಿಷ್ಟ್ಯಗಳಲ್ಲಿ ಒಂದು.













೧೭

# ಭಗವದ್ ದರ್ಶನ

ಭಗವದ್ ದೃಷ್ಟಿಯಲ್ಲಿ ಯಾರೂ ಸಣ್ಣವರಲ್ಲ,
ಯಾರೂ ದೊಡ್ಡವರಲ್ಲ !

ಜಗದ ದೇಗುಲದಲ್ಲಿ ಜಗದುದಯ ಕಾರಣನ
ಕಾಣದವನೆಂತು ಕಾಣ್ಬನು ಶಿವನ, ಗುಡಿಯಲ್ಲಿ ?

ಭೂಮಿಯಲ್ಲಿ ಹುಟ್ಟು ಕುರುಡರಿಗಿಂತ
ಕಣ್ಣುಳ್ಳ ಕುರಡರೆನಿತೊಳರು ?

ನನ್ನ ಸಾಹಿತ್ಯದಲ್ಲಿ ಅಧ್ಯಾತ್ಮ ದೃಷ್ಟಿಯೇ ಸರ್ವವ್ಯಾಪಿ,ಅದು ನನ್ನ ಇಡೀ ಜೀವನವನ್ನೆಲ್ಲಾ ಆಕ್ರಮಿಸಿಕೊಂಡಿದೆ.ಸಾಹಿತ್ಯಕ್ಕಾಗಿ ಸಾಹಿತ್ಯ ರಚಿಸುವುದು ನನ್ನ ಉದ್ದೇಶವಲ್ಲ?ಆಧ್ಯಾತ್ಮ ಸಾಧನೆ ನನ್ನ ಜೀವನೋದ್ದೇಶ. ಆ ಸಾಧನೆಯ ಅನುಭವವೇ ಸಾಹಿತ್ಯವಾಗಿ ಹೊರ ಹೊಮ್ಮುತ್ತದೆ.

ಮೌಢ್ಯದ ಸಂಸ್ಪರ್ಶವಿಲ್ಲದೆ,ಪೌರೋಹಿತ್ಯದ ಸೋಂಕಿಲ್ಲದೆ,
ಸುಲಿಗೆಗೆ ಮಾಧ್ಯಮವಾಗದೆ,ಕಲ್ಲು ಲೋಹಗಳಲ್ಲಿಯೂ
ಭಗವಂತನನ್ನು ಕಾಣುವುದಾದರೆ ತಪ್ಪಲ್ಲ.

ಇಲ್ಲಗೈಯೆ ತನ್ನ ತಾನು, ದೇವರಲ್ಲದುಳಿವುದೇನು ?

ನೋಡು ಮೈಥಿಲಿ, ಅಲ್ಲಿ !
ಪನಿ ತಳ್ತ ಶಾದ್ವಲ ಶ್ಯಾಮ ವೇದಿಕೆಯಲ್ಲಿ
ತೃಣ ಸುಂದರಿಯ ಮೂಗುತಿಯ ಮುತ್ತು ಪನಿಯಂತೆ
ಮಿರುಮಿರುಗಿ ಮೆರೆವಾ ಹಿಮಬಿಂದು !ಜ್ವಲಿಸುತ್ತಿದೆ
ನೋಡೆಂತು ಬಣ್ಣದೆಣ್ಣೆಯ ಹಣತೆ ಸೊಡರಂತೆ
ಸಪ್ತರಾಗೋಜ್ವಲಂ ! ಸರ್ವ ಸೃಷ್ಟಿಯ ದೃಷ್ಟಿ ತಾಂ
ಸೆರೆಯಾಗಲೊಪ್ಪಿರುವುದಾ ಹನಿಯ ಹೃದಯದಾ

ಪುಟ್ಟ ಜೋತಿಯಲಿ! ದೇವರ ಮುಖದರ್ಶನಕೆ
ಸಾಲದೇನಾ ಹನಿಯ ಕಿರುದರ್ಪಣಂ? ನಿಲ್ಲಿಮ್; ಆ
ಇರ್ಬನಿಯ ಕಿಡಿಗುಡಿಯೊಳಾರಾಧನೆಯನೆಸಗಿ
ಮುಂಬರಿಯುವಂ!

ನನ್ನಂತೆ ಸಾಕಾರ ಪೂಜೆ ಮಾಡುವ ವ್ಯಕ್ತಿ ಮತ್ತೊಬ್ಬನಿಲ್ಲ. ಸುಂದರವಾದ ಹೂವು, ಮುಂಗಾರಿನ ಮೋಡ, ಮಿಂಚುಹುಳು, ಕೆಂದಳಿರು, ಹಸುರು ಸೃಷ್ಟಿಯ ಒಂದೊಂದು ವಸ್ತುವನ್ನೂ ನಾನು ತನ್ಮಯತೆಯಿಂದ ಆರಾಧಿಸುತ್ತೇನೆ. ನನಗೆ ರವಿವದನವೆ ಶಿವ ಸದನ. ನನ್ನ ದೃಷ್ಟಿಯಲ್ಲಿ ಜಡವೆಂಬುದೆಲ್ಲ ಚೇತನದ ನಟನೆಯ ಲೀಲೆ. ರಸವಲ್ಲದಿನ್ನಿಲ್ಲ ವಿಶ್ವದಲಿ.

ಬಿಡೊ ಅಲ್ಲಿರಲಿ ಆ ಹೂವು! ನೀ ಸೃಷ್ಟಿಸಲಾರದ ಚೆಲುವಿಗೆ
ನಿನ್ನಿಂದೇತಕೆ ಸಾವು!

ಚೆಲುವೇ ದೇವರು, ಒಲವೇ ಪೂಜೆ,
ಚೆಲುವೆಂಬುದು ಆ ಶಿವನಲ್ಲೇನು?

ಪ್ರಶಂಸೆ, ಪೂಜೆ, ಆರಾಧನೆ, ಉಪಾಸನೆ ಈ ಪದಗಳು ನಮ್ಮ ಮನಸ್ಸಿನ ಅಥವಾ ಬುದ್ಧಿಯ ಯಾವ ವ್ಯಾಪಾರಗಳನ್ನು ವರ್ಣಿಸುತ್ತವೆ ಎಂಬುದನ್ನು ಪರಿಶೀಲಿಸಿದರೆ ನಮ್ಮ ಚೇತನದ ಅತಿ ನಿಗೂಢವಾದ ಎರಡು ಪ್ರಧಾನ ಲಕ್ಷಣಗಳು ಗೋಚರವಾಗುತ್ತವೆ. ಒಂದು ಅದರ ಊರ್ಧ್ವಮುಖತೆ, ಮತ್ತೊಂದು ಅದರ ಊರ್ಧ್ವಯಾತ್ರೆ. ಅನ್ಯರಲ್ಲಿದ್ದು ಸದ್ಯಕ್ಕೆ ತನಗಿಲ್ಲದ ಆದರೂ ಪಡೆಯಲಾಶಿಸುವ ಮನೋಧರ್ಮ ಪ್ರಶಂಸೆಯ ರೂಪದಲ್ಲಿ ಮೊದಲು ಮೈದೋರುತ್ತದೆ. ಇಂದು ತಾನಾಗಿಲ್ಲದಿದ್ದರೂ ಮುಂದೆ ತಾನಾಗಲೇಬೇಕೆಂಬ ಎದೆಹಂಬಲ ತೀವ್ರವಾದಂತೆಲ್ಲ ಆ ಪ್ರಶಂಸೆ ಪೂಜಾರೂಪಕ್ಕೆ ತಿರುಗುತ್ತದೆ. ಪೂಜಾವಸ್ತು ಆದರ್ಶವಾಗಿ ಪರಿಣಮಿಸುತ್ತದೆ. ತನ್ನ ಆಕಾಂಕ್ಷೆಯ ಆತ್ಮಶ್ರೀಯನ್ನು ಪಡೆದಿರುವ ಆ ವ್ಯಕ್ತಿ ಪೂಜ್ಯನಾಗುತ್ತಾನೆ. ಬರಿಯ ಊರ್ಧ್ವಮುಖವಾಗಿರುವ ಆಕಾಂಕ್ಷೆ ಸಾಧನೆಯ ರೂಪಕ್ಕೆ ತಿರುಗಿ ಊರ್ಧ್ವಯಾತ್ರಾ ರೂಪಿಯಾದೊಡನೆ ಪೂಜೆ ಆರಾಧನೆಯಾಗುತ್ತದೆ. ಆರಾಧನಾ ಭಾವನೆ ಉಜ್ವಲವಾಗಿ ತಪಸ್ಯಾರೂಪಕ್ಕೆ ತಿರುಗಿದರೆ ಉಪಾಸನೆಯಾಗುತ್ತದೆ. ಉಪಾಸನೆ ತುತ್ತತುದಿಗೆ ತಪಸ್ಯಾರೂಪದ ಸಾಕ್ಷಾತ್ಕಾರದಲ್ಲಿ ಪರ್ಯವಸಾನ ಹೊಂದುತ್ತದೆ. ಆಗ ಸಾಧಕನಿಗೆ ಸಿದ್ಧಿಯಾಯಿತೆಂದು ಹೇಳುತ್ತೇವೆ. ಸಿದ್ಧಿಯೆಂದರೆ ನಿಸ್ತರಂಗದ ನಿರಪೇಕ್ಷಕವಾದ ಪೂರ್ಣತಾ ವಿಶ್ರಾಂತಿ, ತಾದಾತ್ಮ್ಯ, ಶಾಂತಿ.

# ಮೌಢ್ಯದ ಮುಕ್ತಿ

ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ,
ಬಡತನವ ಬುಡಮಟ್ಟ ಕೀಳ ಬನ್ನಿ,
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ,
ವಿಜ್ಞಾನ ದೀವಿಗೆಯ ಹಿಡಿಯಬನ್ನಿ,
ಓ ಬನ್ನಿ, ಸೋದರರೆ, ಬೇಗ ಬನ್ನಿ !

ಮಾಡಿರೈ ಯಾಗಗಳ ! ತಿನ್ನಿರೈ ಭಕ್ಷ್ಯಗಳ !
ಭೋಜನವೆ ಯೋಜನೆಯ ಮುಖ್ಯ ಅಂಗ!

ಎತ್ತಿ ಋತ್ವಿಕ್ಕರನು ಎಸೆ ಹೋಮ ಕುಂಡಕ್ಕೆ
ಅಪ್ಪ ಗ್ರಹಕೂಟ ದೋಷ ಪರಿಹಾರಕ್ಕೆ
ಓ ಬೆಪ್ಪ,
ತುಪ್ಪವನು ಬೆಂಕಿಗೆಸೆಯಲು ಶಮನವಾಗುದೊಡೆ ಗ್ರಹಪೀಡೆ
ಪುಷ್ಟನಪ್ಪಾ ಪುರೋಹಿತನನಾಹುತಿ ಮಾಡೆ
ಮತ್ತಷ್ಟು ಪರಿಹಾರ ದೊರೆಯದೇನ್ ಕೇಡೆ ?

ಎಷ್ಟು ದೇವರ ನೀನೆಷ್ಟು ನಂಬಿದರೇನೊಂದಿಷ್ಟು
ನಂಬದಿರೆ ನಿನ್ನ ನೀನು ?

ನಮ್ಮ ದೇಶಕ್ಕೆ ಏನು ಬಂದರೇನಂತೆ
ಕೊನೆಗೆ ಕಮ್ಯುನಿಸಂ ಏ ಬಂದರೂ ;
ಹಾಕುವೆವು ಅದಕ್ಕೂ ಮೂರು ನಾಮ,

ಮೌಢ್ಯ ಪ್ರಚೋದಕವಾಗುವಂತಹ
ತೀರ್ಥ ಕ್ಷೇತ್ರಗಳ ಪವಾಡದ ಸುಳ್ಳು- ಸುಳ್ಳು
ಕಥೆಗಳನ್ನೆಲ್ಲ ನಿಜ ಎಂದು ಹೇಳಿ ಮಕ್ಕಳನ್ನು
ಮೂಢರನ್ನಾಗಿಸಬೇಡಿ.
ವೈಜ್ಞಾನಿಕ ದೃಷ್ಟಿಯ ವಿಚಾರವಂತರನ್ನಾಗಿಮಾಡಿ.

ವಿಚಾರವಾದಿಯಾದವನು ಅಜ್ಞೇಯತಾವಾದಿಯಾಗಬಹುದೇ ಹೊರತು ನಾಸ್ತಿಕ ಆಗುವುದಕ್ಕೆ ಸಾಧ್ಯವಿಲ್ಲ.

ಶತಶತಮಾನಗಳಿಂದ ನಮ್ಮಲ್ಲಿ ಬೆಳೆದು ಬಂದಿರುವ ಜಾತಿ,ಮತ ಆಚಾರ ಸಂಪ್ರದಾಯಗಳ ಹೆಸರಿನಲ್ಲಿ ನಡೆಯುತ್ತಿರುವ ಮೌಢ್ಯಮೂಲವಾದ ಅವೈಜ್ಞಾನಿಕ ಘಟನೆಗಳು ನಮ್ಮ ಪ್ರಗತಿಗೆ ಕಂಟಕಪ್ರಾಯವಾಗಿದೆ. ಆದಷ್ಟು ಬೇಗ ನಾವು ಇವುಗಳಿಂದ ಪಾರಾಗಬೇಕು. ಪರಮಹಂಸರದಾಗಲಿ ಶ್ರೀಮಾತೆಯವರದಾಗಲಿ ಮೌಢ್ಯ, ಮೌಢ್ಯವೇ!

ಎಲ್ಲರೂ ನಿರಂಕುಶ ಮತಿಗಳಾಗಲಿ !
ಎಲ್ಲರೂ ಸ್ವತಂತ್ರ ಮತಿಗಳಾಗಲಿ !
ಎಲ್ಲರೂ ಮುಕ್ತ ಮತಿಗಳಾಗಲಿ !

ವೇದಗಳು ಹೇಳುತ್ತವೆ, ಉಪನಿಷತ್ತುಗಳು ಹೇಳುತ್ತವೆ ಎಂದರಾಯಿತು ನಮ್ಮವರು ಹೆದರಿ ಬಾಯಿ ಮುಚ್ಚಿಕೊಳ್ಳುತ್ತಾರೆ. ಅದು ಅನಾವಶ್ಯಕ. ಅವುಗಳನ್ನು ಬರೆದವರು ನಮ್ಮಂತೆಯೇ ಮನುಷ್ಯರು.

ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ
ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ;
ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ,
ನಮ್ಮ ಹೃದಯವೆ ನಮಗೆ ಶ್ರೀಧರ್ಮಸೂತ್ರ !

ಮನುಷ್ಯರ ಇತರ ಕೃತಿಗಳಲ್ಲಿ ಇರುವಂತೆ ವೇದೋಪನಿಷತ್ತುಗಳಲ್ಲಿಯೂ ಮೂಢ ಭಾವನೆಗಳೂ ತಪ್ಪು ಭಾವನೆಗಳೂ ಇಲ್ಲದೆ ಇಲ್ಲ. ಕೆಲವರು ಸಾಮಾನ್ಯರಿಗೆ ಈ ವಿಷಯವನ್ನು ತಿಳಿಸದೆ ಅಂಧಗೌರವವನ್ನು ಮಾತ್ರ ಪೋಷಿಸುತ್ತಿದ್ದಾರೆ... ನಮ್ಮ ಪುಣ್ಯ ಭೂಮಿಯಲ್ಲಿ ಹೊಸ ಋಷಿಗಳು ಅವತರಿಸಲಿ.

ವೇದಗಳು ಭಾವ ಮತ್ತು ಕಲ್ಪನಾ ಪ್ರಧಾನವಾಗಿರುವಂತೆ
ವೇದಾಂತವಾದ ಉಪನಿಷತ್ತುಗಳು ಆಲೋಚನಾ
ಪ್ರಧಾನವಾಗಿವೆ.

೨೧

# ನೇಗಿಲ ಯೋಗಿ

ಶ್ರೀ ಸಾಮಾನ್ಯನೆ ಭಗವನ್ ಮಾನ್ಯಂ!
ಶ್ರೀ ಸಾಮಾನ್ಯನೆ ಭಗವದ್ ಧನ್ಯಂ!
ಸಾಮಾನ್ಯತೆ ಭಗವಂತನ ರೀತಿ;
ಸಾಮಾಸ್ಯವೆ ದಿಟ ಭಗವತ್ ಪ್ರೀತಿ!

ಹಳ್ಳಿಗಳ ಮನೆ ಬಿದ್ದು ಹಾಳಾಗುತಿಹವು
ಪೇಟೆಯೊಳು ಲಾಯರರ ಮನೆಯೇಳುತಿಹವು

ಪುರಗಳನು ಸೇರಿದರು ಹಳ್ಳಿಯವರೆಲ್ಲ;
ಹಳ್ಳಿ ನಿರ್ಜನವಾಯ್ತು; ಕೇಳುವರೆ ಇಲ್ಲ

ನೇಗಿಲ ಹಿಡಿದು ಹೊಲದೊಳು ಹಾಡುತ
ಉಳುವಾ ಯೋಗಿಯ ನೋಡಲ್ಲಿ

ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ,
ಹಾರಲಿ ಗದ್ದುಗೆ ಮಕುಟಗಳು,
ಮುತ್ತಿಗೆ ಹಾಕಲಿ ಸೈನಿಕರೆಲ್ಲ,
ಬಿತ್ತುಳುವುದನವ ಬಿಡುವುದೆ ಇಲ್ಲ

ನೇಗಿಲ ಕುಳದೊಳಗಡಗಿದೆ ಕರ್ಮ,
ನೇಗಿಲ ಮೇಲೆಯೆ ನಿಂತಿದೆ ಧರ್ಮ,

ಶಿವನ ಕಾಣಲು ನೀನು ಗುಡಿಗೆ ಹೋಗುವೆಯೇನು?
ನಿನ್ನ ನೇಗಿಲ ಗೆರೆಯ ದಿವ್ಯ ದೇವಾಲಯದಿ
ಶಿವನ ಕಾಣೆಯ ನೀನು?

ಗಂಜಿಯುಂಡರು ಹಳ್ಳಿಯದು ಪರಮನಾಕ,
ಪಾಯಸವನುಂಡರು ಪುರ ನರಕಲೋಕ!

ಹಳ್ಳಿಯೊಳು ಬಲುಶಾಂತಿ, ಗಲಿಬಿಲಿಯೆ ಇಲ್ಲ;
ಪಟ್ಟಣವು ಬರಿ ಬೊಬ್ಬೆ, ಶಾಂತಿಯೇ ಇಲ್ಲ !

ನಮ್ಮ ದೇಶದ ಜೀವವೀ ನಮ್ಮ ಹಳ್ಳಿ
ಅಮ್ಮ ಭಾರತಿಗಿದೇ ಸಂಜೀವ ಬಳ್ಳಿ.

ಬಡ ನರನೆ ದೇವನಿಹ ದೇಗುಲವು, ಮುಕ್ತಿ;
ಬಡ ಜನರ ಸೇವೆಯನು ಮಾಡುವುದೆ, ಭಕ್ತಿ;

ಮಾನವರ ಸೇವೆಯೇ ಪರಮಾತ್ಮ ಸೇವೆ;

ಅತಿಭೋಗವದು ರೋಗ, ಕೊಲ್ಲುವುದು ಬೇಗ;
ಪುರಗಳಿಂದದ್ವೈತಂದಿಹುದು ಹಳ್ಳಿಗಳಿಗೀಗ;

ಬೇಸಾಯದಾಧಾರದಿಂದಿರುವ ದೇಶ
ಎಂದಿಗೂ ಸುಖಕರವು, ಅದಕಿಲ್ಲ ನಾಶ !

ಅಮ್ಮ, ಭಾರತಿ, ಹಳ್ಳಿ ಹಾಳಾಗದಿರಲಿ !
ನಿನಗೆಂದು ಸುಖ ಶಾಂತಿ ಯಾನಂದವಿರಲಿ !

ಸರ್ವೋದಯ ! ಸರ್ವೋದಯ !
ಸರ್ವೋದಯ ಯುಗ ಮಂತ್ರ !
ಸರ್ವೋದಯವೆ ಸ್ವಾತಂತ್ರ್ಯದ ಶ್ರೀತಂತ್ರ !

ಸರ್ವರಿಗೆ ಸಮ ಬಾಳು,
ಸರ್ವರಿಗೆ ಸಮಪಾಲು !

ಕಷ್ಟವಿದ್ದರೂ ಸರಿಯೆ, ಇರಲಿ ಸ್ವಾತಂತ್ರ್ಯ
ಸುಖವಿದ್ದರೂ ಹೀನವೈ ಪಾರತಂತ್ರ

೨೩

## ವಿದ್ಯಾರ್ಥಿ ತಪಸ್ವಿ

ಎಂತೆಂತು ಚಿಂತಿಪುದೊ ಬುದ್ಧಿ ಅಂತಂತು ಆಗುವುದು ಸಿದ್ಧಿ;
ಎತ್ತೆತ್ತ ಚಲಿಸುವುದೊ ಮನವು ಅತ್ತತ್ತ ತಿರುಗುವುದು ತನುವು !

ಅಲ್ಪ ನಾನು ಎಂದು ಕುಗ್ಗಿ ಮುದುಡಬೇಡವೊ
ಓ ಅಲ್ಪನೆ
ಅನಂತದಿಂದ ಗುಣಿಸಿಕೊ, ನೀ ಅನಂತವಾಗುವೆ.

ನಾನು ಗುಲಾಮನೆಂದು ಹೇಳಿಕೊಳ್ಳುವ ಮನುಷ್ಯನು
ಕಡೆಗೆ ಗುಲಾಮನೆ ಆಗುತ್ತಾನೆ ;
ನಾನು ಮುಕ್ತನೆಂದು ಹೇಳಿಕೊಳ್ಳುವವನಿಗೆ
ಮುಕ್ತಿಯೇ ಲಭಿಸುತ್ತದೆ;
ಮನಸ್ಸಿನಂತೆ ಮಾಯೆ, ಮನಸ್ಸಿನಂತೆ ಮುಕ್ತಿ


ವಿದ್ಯಾರ್ಥಿಗಳು ಬೆಳೆಯುವ ಗದ್ದೆಗಳಾಗಬೇಕು,
ತುಂಬುವ ಚೀಲಗಳಾಗಬಾರದು.

ನಮ್ಮ ಉತ್ಸಾಹ ಹುಲ್ಲಿನ ಬೆಂಕಿಯಾಗಬಾರದು,
ಕಲ್ಲಿದ್ದಲ ಕಾವಾಗಬೇಕು.

ವಿದ್ಯಾರ್ಥಿಯ ಜೀವನವೂ ಒಂದು ತಪಸ್ಸಾಧನೆ;

ಪ್ರತಿಯೊಬ್ಬ ದಿಟವಾದ ವಿದ್ಯಾರ್ಥಿಯು
ಒಬ್ಬ ಗೌರವ ತಪಸ್ವಿ;

ವಿದ್ಯಾರ್ಜನೆಯ ಸಮಯವೆಂದರೆ
ಆತ್ಮಶಕ್ತಿಯ ಸಂಗ್ರಹದ ಕಾಲ
ಆತ್ಮಶ್ರೀ ಸಾಧಕನಾದ ವಿದ್ಯಾರ್ಥಿಯು ತಪಸ್ವಿ.
ಆತ್ಮಶ್ರೀ ಇಲ್ಲದ ವಿದ್ಯೆ
ಶ್ರೀ ರಾಮನಿಲ್ಲದ ಅಯೋಧ್ಯೆ



ವಿದ್ಯೆ ಆತ್ಮಶ್ರೀಯಿಂದ ಪ್ರದೀಪ್ತವಾದರೆ ಅದು ನಿಜವಾಗಿಯೂ ವಿದ್ಯೆಯಾಗುತ್ತದೆ. ಇಲ್ಲದಿದ್ದರೆ ಅದು ಎಷ್ಟು ಅಕ್ಷರಗಳ ಪದವಿಗೆ ಬೇಕಾದರು ಏರಿರಲಿ ಅವಿದ್ಯೆ ಎನಿಸಿಕೊಳ್ಳುತ್ತದೆ.

ನಿಮ್ಮಲ್ಲಿರುವ ಕೇಡು ಕಷ್ಟಗಳಿಗೆಲ್ಲ ನೀವೇಕಾರಣ,
ಬೇರೆಕಾರಣವಿಲ್ಲ !

ಮತಿ ಮಾನವನ ಸರ್ವೋತ್ಕೃಷ್ಟವಾದ ಆಯುಧ ;
ಮತೀಯ ಕತ್ತಲಲ್ಲಿ ದಾರಿ ತೋರುವ ಕೈದೀವಿಗೆ !

ಪ್ರೀತಿಯ ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕಾಗಿ ಹಸಿದಿರ ಬೇಕಾಗುತ್ತದೆ; ಅವುಗಳನ್ನೋದಿ ಜಯಿಸುವುದಕ್ಕಾಗಿ ನಿದ್ದೆಗೆಡ ಬೇಕಾಗುತ್ತದೆ; ಬೆವರು ಸುರಿಸಬೇಕಾಗುತ್ತದೆ; ಎಣ್ಣೆ ಉರಿಸಬೇಕಾಗುತ್ತದೆ; ಎಷ್ಟೋ ಮನೋರಂಜನೆಗಳನ್ನೂ ತ್ಯಾಗಮಾಡಿ ಅಧ್ಯಯನ ತಪಸ್ಸಿನಲ್ಲಿ ಮಗ್ನವಾಗಬೇಕಾಗುತ್ತದೆ. ವ್ಯಾಕರಣದ ನೀರಸತೆಯನ್ನು ಸಹಿಸಿ, ನಿಘಂಟುವಿನ ಹೇರಡವಿಯಲ್ಲಿ ಬೇಸರಗೊಳ್ಳದೆ ತೊಳಲಿ, ಟೀಕೆಟಿಪ್ಪಣಿ ವಿಮರ್ಶೆ ವ್ಯಾಖ್ಯಾನಗಳನ್ನು ತಡಕಿ ಹುಡುಕಿ ಸಂಗ್ರಹಿಸಬೇಕಾಗುತ್ತದೆ. ಇಷ್ಟನ್ನೂ ಹಲ್ಲು ಕಚ್ಚಿಕೊಂಡು ದೃಢ ಮನಸ್ಸಿನಿಂದ ಸಾಧಿಸುವ ಮತಿಗೌರವವಿಲ್ಲದಿದ್ದರೆ, ಸಾಮಾನ್ಯ ಬುದ್ಧಿಯ ಮಾತಂತಿರಲಿ, ಪ್ರತಿಭೆಯೂ ಕೂಡ, ಮರಳುಗಾಡಿನಲ್ಲಿ ಅರತುಹೋಗುವ ಮಹಾನದಿಯಂತೆ, ಕೃಷಿ ಇಲ್ಲದೆ ಕೃಷವಾಗಿ ವ್ಯರ್ಥವಾಗುತ್ತದೆ.

ಯುವಕರು ನಿರಂಕುಶಮತಿಗಳಾಗಬೇಕು. 'ನಿರಂಕುಶಮತಿತ್ವ' ಎಂದರೆ ನಿರಂಕುಶ ಪ್ರಭುತ್ವದಂತೆ ಎಂದು ತಿಳಿಯಬಾರದು. ನಿರಂಕುಶ ಪ್ರಭುತ್ವದ ಲಕ್ಷಣವೆಂದರೆ ವಿವೇಕಹೀನವಾದ ಸ್ವಚ್ಛಂದ ವರ್ತನೆ. ಸಂಯಮಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೇ ನಿರಂಕುಶಮತಿ.

ವಿದ್ಯೆ ಎಂಬ ದೀಪವನ್ನು
ಎಲ್ಲರ ಹೃದಯಗಳಲ್ಲೂ ಹೊತ್ತಿಸಬೇಕು

ವಿದ್ಯಾರ್ಥಿಗಳಿಗೆಲ್ಲ ಹಿಡಿದಿರುವುದೀಗ
ಸರಕಾರಿ ನೌಕರಿಯ ಚಾಕರಿಯ ರೋಗ



ಹಳ್ಳಿಯಿಂದಲೇ ಬಂದು ಹಳ್ಳಿಯನೆ ದೂರಿ
ಹಳ್ಳಿಯನು ಸುಲಿಯುವರು ಲಾಯರೊಳು ಸೇರಿ.

ಸಂಸ್ಕೃತಿಗೆ ಸದ್ವಿದ್ಯೆಯೆ ಸಾಧನ

ಸರ್ವಮತಗಳಿಗಿಂತ ಶುದ್ಧಹೃದಯದ ಮತ್ತು ಸನ್ಮತಿಯ ಮತವೇ ಮಹೋನ್ನತವಾದುದು.

ಚತುರ್ಮುಖ ಬ್ರಹ್ಮನೇ ಸಾಕ್ಷಾತ್ತಾಗಿ ಬಂದು, ನಾನೀಗ ನಿಮ್ಮೊಡನೆ ಮಾತನಾಡುವಂತೆ ಋಷಿಗಳಿಗೆ ವೇದಗಳನ್ನು ಉಪನ್ಯಸಿಸಿದನು ಎಂದು ಹೇಳಿದರೆ ಕಣ್ಣುಮುಚ್ಚಿಕೊಂಡು ನಂಬಬೇಡಿ.

ಜಾತಿ ಮತ ದೇಶ ಕಾಲಗಳ ಭೇದವಿಲ್ಲದೆ ಎಲ್ಲ ಮಹಾಪುರುಷರ ಜ್ಞಾನಗಂಗೆಗಳ ಮಂಗಳಸಂಗಮದಲ್ಲಿ ತೀರ್ಥಸ್ನಾನಮಾಡಿ ಪೂರ್ಣಜೀವನವನ್ನು ಪೂರ್ಣವಾಗಿ ಅನುಭವಿಸಬೇಕು.

ಮತಭ್ರಾಂತಿಯನ್ನು ಬಿಟ್ಟು ಮತಿಯ ದೀವಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಹೊರಡುವ ಸರ್ವರಿಗೂ 'ದರ್ಶನ' ಸುಲಭಸಾಧ್ಯ.

ಯುವಕರು ವೇಷ ಭೂಷಣಗಳಲ್ಲಿ ಅತಿ ಷೋಕಿಗೆ ಹೋಗದೆ ಸರಳ ಸಾಧಾರಣವಾಗಿದ್ದರೆ ಸ್ವಲ್ಪವಾದರೂ ಉಳಿತಾಯವಾಗುತ್ತದೆ. ಅಲ್ಲದೆ ಷೋಕಿ ಮಾಡಲೆಂದು ಮದುವೆ ಮಾಡಿಕೊಂಡು ಮಾವಂದಿರ ಮೂಲಧನಕ್ಕೆ ಬಾಯಿ ಬಾಯಿ ಬಿಡುವುದೂ ತಪ್ಪುತ್ತದೆ.

ನಿಮ್ಮ ಕಾಲ ಮೇಲೆ ನೀವು ನೆಮ್ಮದಿಯಾಗಿ ನಿಲ್ಲುವ ಶಕ್ತಿ ಬರುವ ಮೊದಲು ಮದುವೆಯಾಗಬೇಡಿ; ಆತ್ಮಕ್ಕೆ ಅಗೌರವವನ್ನು ಮನಸ್ಸಿಗೆ ಯಾತನೆಯನ್ನು ದೇಶಕ್ಕೆ ಹಾನಿಯನ್ನು ತರಬೇಡಿ.

ಜೀವನದಲ್ಲಿ ಮುಂಬರಿಯಬೇಕಾದರೆ ನಮ್ಮ ಹೃದಯದಲ್ಲಿ ಒಂದು ಶಕ್ತಿನಿಧಿಯನ್ನು ಶೇಖರಿಸಬೇಕು; ನಮ್ಮ ಆತ್ಮ ಓಜಸ್ವಿಯಾಗಬೇಕು; ನಾವೆಲ್ಲರೂ 'ನಿರಂಕುಶ'ಮತಿಗಳಾಗಿ ದರ್ಶನ ದ್ರಷ್ಟಾರರಾಗಬೇಕು. ಧ್ಯಾನಮಯ ನಿರ್ಮಲಜೀವನದಿಂದ ಅಂತಹ ಓಜಸ್ಸು ಲಭಿಸುತ್ತದೆ. ಪುಣ್ಯಜೀವನವೆ ಪಾವನ ತಪಸ್ಸು.

೨

## ಕನ್ನಡ ದೀಕ್ಷೆ

ನನ್ನದು ಭಾಷೆ, ನನ್ನದು ನಾಡು,
ಎನ್ನದ ಮಾನವನೆದೆ ಸುಡುಗಾಡು !

ಎಲ್ಲಾದರು ಇರು; ಎಂತಾದರು ಇರು
ಎಂದೆಂದಿಗೂ ನೀ ಕನ್ನಡವಾಗಿರು !


ಬಾರಿಸು ಕನ್ನಡ ಡಿಂಡಿಮುವ
ಓ ಕರ್ನಾಟಕ ಹೃದಯ ಶಿವ

ಕನ್ನಡಕೆ ಹೋರಾಡು ಕನ್ನಡದ ಕಂದ
ಕನ್ನಡವ ಕಾಪಾಡು ನನ್ನ ಆನಂದ
ಮೊಲೆಯ ಹಾಲೆಂತಂತೆ ಸವಿಜೇನು ಬಾಯ್ಗೆ
ತಾಯಿಯಪ್ಪುಗೆಯಂತೆ ಬಲು ಸೊಗಸು ಮೆಯ್ಗೆ
ಗುರುವಿನೊಳ್ನುಡಿಯಂತೆ ಶ್ರೇಯಸ್ಸು ಬಾಳ್ಗೆ
ತಾಯ್ನುಡಿಗೆ ದುಡಿದು ಮಡಿ ಇಹಪರಗಳೇಳ್ಗೆ !

ದೀಕ್ಷೆಯ ತೊಡು ಇಂದೇ; ಕಂಕಣ ಕಟ್ಟಂದೇ;
ಕನ್ನಡ ನಾಡೊಂದೇ; ಇನ್ನೆಂದೂ ತಾನೊಂದೇ; !

ಕನ್ನಡವೆನೆ ಕುಣಿದಾಡುವುದೆನ್ನೆದೆ
ಕನ್ನಡವೆನೆ ಕಿವಿ ನಿಮಿರುವುದು. !

ಕನ್ನಡಕ್ಕಾಗಿ ಕೈಯೆತ್ತು; ನಿನ್ನ ಕೈ ಕಲ್ಪವೃಕ್ಷವಾಗುತ್ತದೆ!
ಕನ್ನಡಕ್ಕಾಗಿ ಕೊರಳೆತ್ತು; ಅಲ್ಲಿ ಪಾಂಚಜನ್ಯ ಮೂಡುತ್ತದೆ!
ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು
ಅದೇ ಗೋವರ್ಧನ ಗಿರಿಧಾರಿಯಾಗುತ್ತದೆ.



ಕನ್ನಡಪ್ರಜ್ಞೆ ವಿಶ್ವಪ್ರಜ್ಞೆಯಾಗುವುದಕ್ಕಾಗಿಯೂ
ವಿಶ್ವಪ್ರಜ್ಞೆ ಕನ್ನಡಪ್ರಜ್ಞೆಯಲ್ಲಿ ಅವತರಿಸುವುದಕ್ಕಾಗಿಯೂ
ಈ ವಿಶ್ವ ಕನ್ನಡ ಸಮ್ಮೇಳನ ಇಲ್ಲಿ ನಡೆದಿದೆ.

ಕನ್ನಡದ ವಿಷಯದಲ್ಲಿ ನಾನು ಟ್ಯಾಂಕಿನಂತೆ ಮುನ್ನುಗ್ಗುತ್ತೇನೆ
ನೀವು ದಾರಿ ಬಿಟ್ಟರೋ ಸರಿ;
ಇಲ್ಲವೋ ಅಪ್ಪಚ್ಚಿಯಾಗುತ್ತೀರಿ.

ನುಡಿ ಬಿಟ್ಟರೆ ನಾಡು ಬಿಟ್ಟಂತೆ
ಭಾಷೆಗೇಡಿ ದೇಶಗೇಡಿಯೂ ಆಗುತ್ತಾನೆ.

ನಮ್ಮ ಕರ್ನಾಟಕ ಬರಿಯ ದೇಶ
ವಿಸ್ತೀರ್ಣಕ್ಕೆ ಮಾತ್ರ ಸಂಬಂಧ ಪಟ್ಟುದಲ್ಲ;
ಕಾಲವಿಸ್ತೀರ್ಣವನ್ನೂ ನಾವು ಪ್ರಮುಖವಾಗಿ ಭಾವಿಸುತ್ತೇವೆ.
ಅದನ್ನು ಚದರಮೈಲಿಗಳಿಂದ ಅಳೆದರೆ ಸಾಲದು;
ಚದರ ವರ್ಷಗಳಿಂದಲೂ ಗುರುತಿಸ ಬೇಕು.;

ಕನ್ನಡ ಕಾವ್ಯಗಳನ್ನೋದುವಾತನು ಅಮೆರಿಕೆಯಲ್ಲಿದ್ದರೂ ಅದು ಕರ್ನಾಟಕವೆ; ಪಂಪನನೋದುವ ನಾಲಗೆ ಮಿಸಿಸಿಪಿ ಹೊಳೆಯ ನೀರನ್ನೀಂಟಿದರೂ ಅದು ಕಾವೇರಿಯೇ; ಕುಮಾರವ್ಯಾಸನನಾಲಿಪ ಕಿವಿ ಆಂಡಿಸ್ ಪರ್ವತವನ್ನೇರುತ್ತಿದರೂ ಅದು ಸಹ್ಯಾದ್ರಿಯೆ.

ಬರಿಯ ಚದರ ಮೈಲಿಗಳಲ್ತು ಕರ್ನಾಟಕ ದೇಶ ವಿಸ್ತೀರ್ಣಂ; ನೆನೆ ನೆನೆ, ಮನೋಮಯ ಸಂಸ್ಕೃತಿಯ ಕೋಶ ವಿಸ್ತೀರ್ಣಮಂ; ಪ್ರಾಣಮಯ ಭಾವಮಯ ವಿಸ್ತೀರ್ಣಮಂ; ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ.

ಕರ್ನಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೆ ?
ಮಂತ್ರ ಕಣಾ! ಶಕ್ತಿ ಕಣಾ !
ತಾಯಿ ಕಣಾ ! ದೇವಿ ಕಣಾ !



ಬೆಂಕಿಕಣಾ ! ಸಿಡಿಲು ಕಣಾ !
ಕಾವ ಕೊಲುವ ಒಲವ ಬಲವ
ಪಡೆದ ಚಲದ ಚಂಡಿ ಕಣಾ !
ಋಷಿಯ ಕಾಣ್ಬ ಕಣ್ಣಿಗೆ.

ಇರುವಲ್ಪ ಶಕ್ತಿಯನು ಇರುವಲ್ಪ ದ್ರವ್ಯವನು
ಪರಭಾಷೆ ಮೋಹಕ್ಕೆ ಚೆಲ್ಲಬೇಡಿ
ಹೂಮಾಲೆ ಸೂಡುವೆವು ಕೊರಳಿಂಗೆ ಎಂದೆನುತೆ
ನೇಣುರುಳನೆಳೆದಯ್ಯೊ ಕೊಲ್ಲಬೇಡಿ

ಇಂಗ್ಲೀಷ್ ಭಾಷೆ ಬಲತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ನಿಯಂತ್ರಣ ಗೊಳ್ಳದಿದ್ದರೆ, ಇಂಗ್ಲೀಷ್ ಶಿಕ್ಷಣಮಾಧ್ಯಮ ತೊಲಗಿ ಪ್ರಾದೇಶಿಕ ಭಾಷೆಗೆ ಆ ಸ್ಥಾನ ಲಭಿಸದಿದ್ದರೆ, ನಮ್ಮ ದೇಶ ಹತ್ತೇ ವರ್ಷಗಳಲ್ಲಿ ಸಾಧಿಸಬೇಕಾದುದನ್ನು ಇನ್ನೊಂದು ನೂರು ವರ್ಷಗಳಲ್ಲಿಯೂ ಸಾಧಿಸಲಾರದೆ ನಿತ್ಯರೋಗಿಯಂತಾಗುತ್ತದೆ.

ಚಿರಂತನ ಮೌಲ್ಯಗಳನ್ನು ತ್ಯಜಿಸಿದ ಸಾಹಿತ್ಯ ಬಹುದಿನ ಬದುಕಲಾರದು.



ಕುವೆಂಪು ಹುಟ್ಟಿದ ಕುಪ್ಪಳಿ ಮನೆ.

೨೯

## ಮಗು - ನಗು

ನಗು - ನಗು - ನಗು
ಓ ಮುದ್ದು ಮಗು !
ಮೊಗ್ಗು ಮೊಗದ ನೀನು ನಗೆ
ಹೂವು ಕಣಾ ಜಗದ ಹಗೆ

ಹುಡುಗರ ಆಟ ಸಾದಾರಣವೇನಮ್ಮಾ
ಬರಗಾಲ ಬರದಂತೆ ಮಾಡುವುದಮ್ಮಾ
ಹುಡುಗರು ಆಟವ ಬಿಟ್ಟಂದಿಗಮ್ಮಾ
ಲೋಕವೆ ನಡೆಯದು ಕೇಳಮ್ಮಾ

### ಒಡವೆಗಳು

ಚಿನ್ನದ ಒಡವೆಗಳೇತಕೆ ಅಮ್ಮಾ ?
ತೊಂದರೆ ಕೊಡುವುವು ಬೇಡಮ್ಮಾ
ಬಣ್ಣದ ಬಟ್ಟೆಗಳೇತಕೆ ಅಮ್ಮಾ
ಮಣ್ಣನೊಳಾಡಲು ಬಿಡವಮ್ಮಾ !

ಚೆಂದಕೆ, ಚೆಂದಕೆ ಎನ್ನುವೆಯಮ್ಮಾ !
ಚೆಂದವು ಯಾರಿಗೆ ಹೇಳಮ್ಮಾ
ನೋಡುವರಿಗೆ ಚೆಂದವು, ಆನಂದವು;
ಆಡುವ ಎನಗಿದು ಬಲು ಬಂಧ

ನನ್ನೀ ಶಿಶುತನ ನಿನ್ನೀ ತಾಯ್ತನ
ಎರಡೇ ಒಡವೆಗಳೆಮಗಮ್ಮ
ನಾ ನಿನಗೊಡವೆಯು; ನೀ ನನಗೊಡವೆಯು;
ಬೇರೆಯ ಒಡವೆಗಳೇಕಮ್ಮ ?




ದೊಡ್ಡವರೆಲ್ಲರ ಹೃದಯದಿ ಕಟ್ಟಿದ
ತೊಟ್ಟಿಲ ಲೋಕದಲಿ
ನಿತ್ಯ ಕಿಶೋರತೆ ನಿದ್ರಿಸುತಿರುವುದು
ವಿಸ್ಮೃತ ನಾಕದಲಿ
ಮಕ್ಕಳ ಸಂಗದೊಳೆಚ್ಚರಗೊಳ್ಳಲಿ
ಆನಂದದ ಆ ದಿವ್ಯ ಶಿಶು;
ಹಾಡಲಿ ಕುಣಿಯಲಿ; ಹಾರಲಿ ಏರಲಿ
ದಿವಿಜತ್ವಕೆ ಈ ಮನುಜ ಪಶು !

ಹಣವನು ಗಳಿಸೆಂದಣ್ಣನಿಗೆಲ್ಲರು ಬುದ್ಧಿಯ ಹೇಳುವರೇಕಮ್ಮಾ !
ಹಣವೆಂದರೆ ನಾವಾಡುವ ಮಣ್ಣಿನ ಪುಡಿಗಿಂತಲು ಚೆಲುವೇನಮ್ಮ ?

ಆಟ ಮುಗಿಯುವ ಮುನ್ನ ಕರೆಯಬೇಡೆನ್ನ !
ಆಟ ಮುಗಿಯಲು ನಾನೆ ಬರುವೆನಮ್ಮಾ !
ಇದ್ದರೂ ಸವಿಯೂಟ ಬೇಡವೆನಗೀಗ ;
ಪೂರೈಸಲೀ ಆಟ ಬರುವೆನಾಗ !

ಧೂಳಾಟವಾಡುವುದ ಕಲಿಸೆನಗೆ, ಕಂದ,
ಬಳಲಿ ಬಂದಿಹೆ ಜಗದ ಮರುಳು ಕಣದಿಂದ !

ಮನೇ ಮನೇ ಮುದ್ದು ಮನೇ,
ಮನೇ ಮನೇ ನನ್ನ ಮನೇ;
ನನ್ನ ತಾಯಿಯೊಲಿದ ಮನೆ,
ನನ್ನ ತಂದೆ ಬೆಳೆದ ಮನೆ;
ತಾಯಿ ಮುತ್ತು ಕೊಟ್ಟ ಮನೆ,
ತಂದೆ ಎತ್ತಿ ಕೊಂಡ ಮನೆ;
ನಾನು ನುಡಿಯ ಕಲಿತ ಮನೆ,
ನಾನು ನಡಿಗೆಯರಿತ ಮನೆ;
ನಾನು ಬಿದ್ದು ಎದ್ದ ಮನೆ,
ಮೊದಲು ಬೆಳಕು ಕಂಡ ಮನೆ;



## ಆನಂದಾನುಭೂತಿ

ಮನುಷ್ಯನ ಮನಸ್ಸು ಊರ್ಧ್ವಮುಖಿ. ಅವನ ಕನಸು ಗಗನಗಾಮಿ. ಅವನ ಕಲ್ಪನೆ ನಕ್ಷತ್ರಯಾತ್ರಿ. ಆ ಊರ್ಧ್ವಮುಖದ, ಗಗನಗಮನದ ಮತ್ತು ನಕ್ಷತ್ರಯಾತ್ರೆಯ ಸಾಹಸಕ್ಕೆ ಮೊದಲನೆಯ ಸಾಕ್ಷಿ ಚರಿತ್ರೆ; ಎರಡನೆ ಸಾಕ್ಷಿ ಕಲೆ. ಒಂದು ಬಹಿರ್ಮುಖದ ಸಾಹಸವಾದರೆ ಮತ್ತೊಂದು ಅಂತರ್ಮುಖದ ಸಾಹಸ. ದಾರಿಗಳೆರಡಾದರೂ ಗುರಿಗಳೆರಡಲ್ಲ. ಇಂದಿಲ್ಲದಿದ್ದರೂ ಮುಂದೆ ಕೈಗೂಡಬಹುದೆಂದು ನಂಬಿರುವ ಸುಖಶಾಂತಿಗಳ ಸಂಪಾದನೆಯೆ ಮಾನವಸಾಹಸಕ್ಕೆ ಪರಮಗಂತವ್ಯ. ಆ ಸಾಹಸ ಅಲೆಕ್ಸಾಂಡರನ ದಂಡಯಾತ್ರೆಯಾಗಿ, ಕಾಳಿದಾಸನ ಮೇಘದೂತವಾಗಿ, ಶ್ರವಣಬೆಳ್ಗೊಳದ ಗೊಮ್ಮಟೇಶ್ವರನಾಗಿ ನಾನಾರೂಪಿಯಾಗಿ ವ್ಯಕ್ತವಾಗುತ್ತದೆ. ಆ ಸಾಹಸದ ಫಲವಾಗಿಯೆ ಕ್ರಿಸ್ತ ಬುದ್ಧರೂ ಆವಿರ್ಭವಿಸುತ್ತಾರೆ.

ಎಲ್ಲ ಕಲೆಗಳ ಗುರಿಯೂ ಆನಂದ, ರಸಾನುಭೂತಿ. ಆ ಆನಂದದ ಸ್ವರ್ಗಕ್ಕಾಗಿಯೆ ನಿರಂತರವೂ ಮರ್ತ್ಯವು ಅಮರ್ತ್ಯದ ಕಡೆಗೆ ಮುಖಚಾಚಿ ನೋಡುತ್ತದೆ, ಕೈನೀಡಿ ಬೇಡುತ್ತದೆ. ಒಮ್ಮೊಮ್ಮೆ,ಕಲ್ಪನೆ ಐಹಿಕ ಯಥಾರ್ಥವನ್ನೆ ಶೃಂಗರಿಸಿ ತನ್ನ ಸ್ವಪ್ನಸ್ವರ್ಗವನ್ನು ರಚಿಸಲು ಪ್ರಯತ್ನಿಸುತ್ತದೆ. ಒಮ್ಮೊಮ್ಮೆ, ಮರ್ತ್ಯದಿಂದ ಅಮರ್ತ್ಯಕ್ಕೆ ವರ್ಣವರ್ಣದ ಸ್ವರ್ಣಸೇತುವನ್ನು ಬೀಸಿ, ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಪಯಣ ಸೌಕರ್ಯವನ್ನು ಕಲ್ಪಿಸಿ, ಕಾಮಧೇನುವಿನ ಕೆಚ್ಚಲ ಸೋನೆಗೊಂದು ಕಾಲುವೆಮಾಡಿ, ಆ ಸೊದೆ ಮನೆಯಂಗಳದಲ್ಲಿರುವ ಹೊಂಗಿಂಡಿಗೆ ದುಮುಕುವಂತೆ ಮಾಡುತ್ತದೆ. ಆ ಕವಿಪ್ರತಿಭೆಯ ಭಾಗೀರಥಿಯಲ್ಲಿ ರಸಸ್ನಾನ ಮಾಡಿ, ಕ್ಷಣಿಕಮರ್ತ್ಯದ ಮಣ್ಣು ದೂಳು ಬಿಸಿಲು ಕೆಸರುಗಳಿಂದ ಪಾರಾದ ಸಹೃದಯನ ಆತ್ಮಕ್ಕೆ ಗೋಚರವಾಗುತ್ತದೆ ಶಾಶ್ವತವಾದ ಆನಂದಾನುಭೂತಿ.

ಸೃಷ್ಟಿಕವಿಯ ವಿಶ್ವಕಾವ್ಯಕ್ಕೆ ಆನಂದವೇ ಕಾರಣ, ಉದ್ದೇಶ ಮತ್ತು ಪ್ರಯೋಜನ - ಎಂಬುದು ಪೂರ್ಣದೃಷ್ಟಿಗೆ ಮಾತ್ರ ಸ್ವಸಂವೇದ್ಯ.

## ಪ್ರಾರ್ಥನೆ

ನಿನ್ನ ಬಾಂದಳದಂತೆ
ನನ್ನ ಮನವಿರಲಿ;
ನಿನ್ನ ಸಾಗರದಂತೆ
ನನ್ನ ಎದೆಯಿರಲಿ.

ನಿನ್ನ ಸುಗ್ಗಿಯ ತೆರದಿ
ನನ್ನ ಸೊಬಗಿರಲಿ;
ನಿನ್ನ ಲೀಲೆಯ ತೆರದಿ
ನನ್ನ ಬಾಳಿರಲಿ.

ನಿನ್ನ ಬಲವಿರುವಂತೆ
ನನ್ನ ಬಲವಿರಲಿ;
ನಿನ್ನ ತಿಳಿವಿರುವಂತೆ
ನನ್ನ ತಿಳಿವಿರಲಿ.

ನಿನ್ನೊಲ್ಮೆಯಂದದಲಿ
ನನ್ನೊಲ್ಮೆಯಿರಲಿ;
ನಿನ್ನಾಳವೆನಗಿರಲಿ
ನೀನೆ ನನಗಿರಲಿ;

ನಿನ್ನಾತ್ಮದಾನಂದ
ನನ್ನದಾಗಿರಲಿ;
ನಿನ್ನೊಳಿರುವಾ ಶಾಂತಿ
[illegible]ಡೆಗೆ ಬರಲಿ.

## ವಿಶ್ವಮಾನವ ಗೀತೆ

ಓ ನನ್ನ ಚೇತನ
ಆಗು ನೀ ಅನಿಕೇತನ !

ರೂಪರೂಪಗಳನು ದಾಟಿ
ನಾಮಕೋಟಿಗಳನು ಮೀಟಿ,
ಎದೆಯ ಬಿರಿಯೆ ಭಾವದೀಟಿ,
ಓ ನನ್ನ ಚೇತನ

ನೂರು ಮತದ ಹೊಟ್ಟ ತೂರಿ,
ಎಲ್ಲ ತತ್ತ್ವದೆಲ್ಲೆ ಮೀರಿ,
ನಿರ್ದಿಗಂತವಾಗಿ ಏರಿ,
ಓ ನನ್ನ ಚೇತನ

ಎಲ್ಲಿಯೂ ನಿಲ್ಲದಿರು;
ಮನೆಯನೆಂದೂ ಕಟ್ಟದಿರು;
ಕೊನೆಯನೆಂದೂ ಮುಟ್ಟದಿರು;
ಓ ಅನಂತವಾಗಿರು !
ಓ ನನ್ನ ಚೇತನ

ಅನಂತ ತಾನ್ ಅನಂತವಾಗಿ
ಆಗುತಿಹನೆ ನಿತ್ಯಯೋಗಿ;
ಅನಂತ ನೀ ಅನಂತವಾಗು;
ಆಗು, ಆಗು, ಆಗು, ಆಗು,
ಓ ನನ್ನ ಚೇತನ

ತನಗೆ ತಾನ್ ನಿಂದೆಯಪ್ಪುದೆ ಕೊಂದುಕೊಂಡಂತೆ

No man is born to any religon ;
every man has a religion in his soul
Let there be as many religions as
there are human beings in the world

*- Swami Vivekananda*

(ಯಾವ ಮನುಷ್ಯನೂ ಯಾವುದೇ ಧರ್ಮಕ್ಕೂ ಹುಟ್ಟಿಲ್ಲ; ಪ್ರತಿಯೊಬ್ಬರೂ ತಮ್ಮ ಹೃದಯದಲ್ಲಿ ಧರ್ಮವನ್ನು ಒಳಗೊಂಡಿದ್ದಾರೆ; ಆದ್ದರಿಂದ ಜಗತ್ತಿನಲ್ಲಿ ಎಷ್ಟು ಜನರಿದ್ದಾರೋ ಅಷ್ಟು ಧರ್ಮಗಳಿರಲಿ)

## ಶ್ರೀರಾಮಾಯಣ ದರ್ಶನಂ


ಪಂಪನಾ ಗಾಂಭೀರ್ಯ,
ರನ್ನ ವೀರ್ಯ,
ಜನ್ನನಾ ಋಜು ಕುಶಲ
ಕಥನ ಕಾರ್ಯ,
ನಾಗವರ್ಮನ ಕಲ್ಪನಾ
ಕಾದಂಬರೀ ಚಂದ್ರಿಕಾ
ಸ್ವಾಪ್ನ ಸೌಂದರ್ಯ,
ರಾಘವಾಂಕನ ನಾಟಕೀಯ ಚಾತುರ್ಯ,
ನಾರಣಪ್ಪನ ದೈತ್ಯ ರುಂದ್ರತಾ ದಿವ್ಯ ಧೈರ್ಯ,
ಲಕ್ಷ್ಮೀಶನಾ ಮೃದಲ ಮಂಜುಲ ನಾದ ಮಾಧುರ್ಯ,
ರತ್ನಾಕರನ ಯೋಗ ದೃಷ್ಟಿಯ ಸಾಗರೌದಾರ್ಯ,
ಸಕಲ ಛಂದಸ್ ಸರ್ವ ಮಾರ್ಗ ಶೈಲಿಗಳಮರ ಐಶ್ವರ್ಯ,
ಸರ್ವವೂ ಸಂಗಮಿಸಿದೀ 'ದರ್ಶನಂ' ತಾನಕ್ಕೆ ಕೃತಿಗಳಾಚಾರ್ಯ!

**ಕುವೆಂಪು**

ಅಂತರಾತ್ಮ ಪ್ರಚೋದನೆಯಿರದ ಬುದ್ಧಿ ತಾನುಂ
ಸೋಲದೇನಿಂದ್ರಿಯದ ಹಿತದ ಲೌಕಿಕಕೆ.

ಅವರಿವರ ಮತವಿರಲಿ ನನ್ನಪಥನನಗಿರಲಿ

ಎಂದು



## ಅನಿಕೇತನವಾದ ದಿವ್ಯಚೇತನ